ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 9 | ಫೆಬ್ರವರಿ 27, 1983 | ಬೆಲೆ 60 ಪೈಸೆ

ಏಜೆನ್ಸಿದಾರರ ಗಮನಕ್ಕೆ

ಕಾರ್ಲ್ ಮಾರ್ಕ್ಸ್ ಮರಣ ಶತಾಬ್ಧಿಯ ಅಂಗವಾಗಿ ಮಾರ್ಚ್ 14 ರಂದು 'ಐಕ್ಯರಂಗ'ವು ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡುತ್ತದೆ.

ಸುಮಾರು ನಲವತ್ತು ಪುಟಗಳ ಈ ವಿಶೇಷ ಸಂಚಿಕೆಯು ಡೆಮ್ಮಿ ¼ ಆಕಾರದಲ್ಲಿದ್ದು ಆಕರ್ಷಕ ಮುಖಪುಟವನ್ನು ಹೊಂದಿರುತ್ತದೆ.

ಈ ವಿಶೇಷ ಸಂಚಿಕೆಯ ಬೆಲೆ ಕೇವಲ 1 ರೂಪಾಯಿ ಮಾತ್ರ.

'ಐಕ್ಯರಂಗ'ದ ಮಾರ್ಚ್ 6ರ ಸಂಚಿಕೆ ಪ್ರಕಟವಾಗುವುದಿಲ್ಲ.

ಏಜೆನ್ಸಿದಾರರು ತಮಗೆ ವಿಶೇಷ ಸಂಚಿಕೆಯ ಎಷ್ಟು ಪ್ರತಿಗಳು ಬೇಕು ಎಂಬುದನ್ನು ಮಾರ್ಚ್ 5ನೇ ತಾರೀಖಿನ ಒಳಗಾಗಿ ನಮಗೆ ತಿಳಿಸಬೇಕು ಹಾಗೂ ಮುಂಗಡ ಹಣವನ್ನು ಕಳಿಸಬೇಕೆಂದು ವಿನಂತಿ.

ವ್ಯವಸ್ಥಾಪಕ
ಐಕ್ಯರಂಗ

ಅಮೇರಿಕಾ ಒಳಸಂಚನ್ನು ಬಯಲಿಗೆಳೆಯಲು ಒತ್ತಾಯಿಸಿ ಮಾರ್ಚ್ ೫ ರಂದು ದೆಹಲಿಯಲ್ಲಿ ಬೃಹತ್ ಪ್ರದರ್ಶನ

ಮಾರ್ಚ್ ಏಳರಿಂದ ಹನ್ನೊಂದರ ವರೆಗೆ ನವದೆಹಲಿಯಲ್ಲಿ ನಡೆಯಲಿರುವ ಅಲಿಪ್ತ ದೇಶಗಳ ಶೃಂಗ ಸಮ್ಮೇಳನದಲ್ಲಿ ಜಾಗತಿಕ ಶಾಂತಿಯನ್ನು ಕಾಪಾಡಲು ಹಾಗೂ ಸಮಸ್ತ ದೇಶಗಳ ಸ್ವಾತಂತ್ರ್ಯವನ್ನು ರಕ್ಷಿಸಲೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಐದು ಎಡ ಪ್ರಜಾಸತ್ತಾತ್ಮಕ ಪಕ್ಷಗಳು ಮಾರ್ಚ್ 5 ರಂದು ನವದೆಹಲಿಯಲ್ಲಿ ಬೃಹತ್ ಪ್ರದರ್ಶನ ನಡೆಸಲಿವೆ.

ಈ ಪ್ರದರ್ಶನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್‌ಪಕ್ಷ, ಫಾರ್ವರ್ಡ್‌ಬ್ಲಾಕ್ ಆರ್. ಎಸ್. ಪಿ., ಪ್ರಜಾಸತ್ತಾತ್ಮಕ ಸಮಾಜವಾದೀ ಪಕ್ಷಗಳು ವ್ಯವಸ್ಥೆಗೊಳಿಸಿವೆ.

ಸಾಮ್ರಾಜ್ಯ ಶಾಹಿಗಳ ಒಳಸಂಚುಗಳಿಂದಾಗಿ ಜಾಗತಿಕ ಶಾಂತಿಗೆ ಅಪಾಯವುಂಟಾಗಿದೆ. ಶಸ್ತ್ರಸ್ಪರ್ಧೆಯನ್ನು ಕಡಿಮೆಗೊಳಿಸಲು ಹಾಗೂ ವಿಶ್ವಶಾಂತಿಗಾಗಿ ಸೋವಿಯತ್ ಯೂನಿಯನ್ ಮುಂದಿಟ್ಟ ಸಲಹೆಗಳನ್ನು ತಿರಸ್ಕರಿಸಿ ಅಮೇರಿಕಾ ಸರ್ಕಾರ ಯುದ್ಧೋನ್ಮತ್ತವಾಗಿ ವರ್ತಿಸುತ್ತಿದೆ. ಇದರಿಂದಾಗಿ ಜಗತ್ತಿನಾದ್ಯಂತ ಯುದ್ಧ ಸಂಭವಿಸಲು ಅಗತ್ಯವಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಪಶ್ಚಿಮ ಯೂರೋಪಿನ ದೇಶಗಳಲ್ಲಿ ಕ್ಷಿಪಣಿಗಳನ್ನು ಸ್ಥಾಪಿಸುವುದನ್ನು ಪ್ರತಿಭಟಿಸಿ ಲಕ್ಷಾಂತರ ಮಂದಿ ಜನತೆ ಪ್ರದರ್ಶನಗಳನ್ನೂ, ಮುತ್ತಿಗೆಗಳನ್ನು ನಡೆಸಿದ್ದರೂ ಸಹ ತನ್ನ ಕ್ಷಿಪಣಿಗಳನ್ನು ಸ್ಥಾಪಿಸುವ ಯೋಜನೆಯನ್ನು ಸತತವಾಗಿ ಮುಂದುವರಿಸುವುದಾಗಿ ಅಮೇರಿಕಾ ಘೋಷಿಸಿದೆ. ಅಮೇರಿಕಾ ಮತ್ತು ಅದರ ನ್ಯಾಟೋ ಕೂಟದ ರಾಷ್ಟ್ರಗಳು ನಡೆಸತೊಡಗಿರುವ ಈ ವಿನಾಶಕಾರೀ ಕೃತ್ಯಗಳಿಂದಾಗಿ ಜಾಗತಿಕ ಶಾಂತಿಗೂ, ವಿಶ್ವನಾಗರಿಕತೆಗೂ ಭಾರೀ ಅಪಾಯ ಉಂಟಾಗಿದೆ. ಈ ವಿಷಯವನ್ನು ದೆಹಲಿಯಲ್ಲಿ ಮಾರ್ಚ್ 5ರಂದು ನಡೆಯಲಿರುವ ಬೃಹತ್ ರ್‍ಯಾಲಿಯಲ್ಲಿ ಅಲಿಪ್ತ ಸಮ್ಮೇಳನದ ಗಮನಕ್ಕೆ ತರಲಾಗುತ್ತದೆ.

ಜಗತ್ತಿನಾದ್ಯಂತ ಮಿಲಿಟರಿ ನೆಲೆಗಳನ್ನು ಸ್ಥಾಪಿಸುವ ಅದರಲ್ಲೂ ಮುಖ್ಯವಾಗಿ ಹಿಂದೂ ಮಹಾಸಾಗರದ ಡಿಗೋ ಗಾರ್ಸಿಯಾವನ್ನು ಪರಮಾಣು ಶಸ್ತ್ರಗಳಿಂದ ಸಜ್ಜಿತಗೊಳಿಸುತ್ತಿರುವ, ಅಲ್ಲದೆ ಅಲ್ಲಿ ಆಧುನಿಕ ಎಫ್–16 ವಿಮಾನಗಳನ್ನು ಇತರ ಬಾಂಬರ್ ವಿಮಾನಗಳನ್ನು ತಂದು ತುಂಬುತ್ತಿರುವುದು, ಅಸಂಖ್ಯ ಯುದ್ಧ ಹಡಗುಗಳನ್ನು ಸನ್ನದ್ಧಗೊಳಿಸುತ್ತಿರುವುದು ಹಿಂದೂ ಮಹಾಸಾಗರದ ತೀರ ಪ್ರದೇಶದ ದೇಶಗಳಿಗೆ ಭಾರೀ ಗಂಡಾಂತರವನ್ನುಂಟು ಮಾಡಿದೆ. ಈ ದೇಶಗಳ ಸಾರ್ವಭೌಮತ್ವಕ್ಕೆ ಅಪಾಯವುಂಟು ಮಾಡುವ ರೀತಿಯಲ್ಲಿ ಅಮೇರಿಕಾ ವರ್ತಿಸುತ್ತಿದೆ. ಇದನ್ನೂ ಕೂಡ ಸಮ್ಮೇಳನದ ಗಮನಕ್ಕೆ ತರಲಾಗುತ್ತದೆ.

ಪಾಕಿಸ್ಥಾನದ ಮಿಲಿಟರಿ ಸರ್ವಾಧಿಕಾರಿಗಳಿಗೆ ಅಮೇರಿಕಾ ಕೋಟ್ಯಾಂತರ ಡಾಲರುಗಳ ಮಿಲಿಟರಿ ನೆರವನ್ನು ನೀಡುತ್ತಿದೆ. ಇದರಿಂದಾಗಿ ಪಾಕಿಸ್ತಾನೀ ಆಡಳಿತಗಾರರು ಅಫಘಾನಿಸ್ತಾನದಿಂದ ಬರುವ ವಿಧ್ವಂಸಕರಿಗೆ ಎಲ್ಲ ರೀತಿಯ ಸಹಾಯ ನೀಡುತ್ತಿದ್ದಾರೆ. ಈ ವಿಧ್ವಂಸಕರು ಅಫಘಾನಿಸ್ತಾನದ ಜನತೆಯನ್ನು ಗಂಡಾಂತರದಲ್ಲಿ ಸಿಲುಕಿಸಲು ಇದರಿಂದ ಅನುಕೂಲವಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಸೋವಿಯತ್ ಸೇನೆಯ ಒಂದು ಭಾಗ ಅಫಘಾನಿಸ್ತಾನದಲ್ಲಿ ಇರಬೇಕಾದ ಅನಿವಾರ್ಯತೆ ಒದಗಿದೆ. ಕಂಪೂಚಿಯಾಗೆ ಸಂಬಂಧಿಸಿದ ಹಾಗೆ ಸಹ ಅಮೇರಿಕ ಇದೇ ಕ್ರಮವನ್ನೇ ಅನುಸರಿಸುತ್ತಿದೆ. ಈ ಎಲ್ಲ ವಿಚಾರಗಳ ಕುರಿತಾಗಿ ಅಲಿಪ್ತ ದೇಶಗಳ ಸಮ್ಮೇಳನ ಚರ್ಚಿಸಿ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವಂತೆ ಒತ್ತಾಯಿಸುವುದು ಪ್ರದರ್ಶನದ ಪ್ರಮುಖ ಉದ್ದೇಶವಾಗಿದೆ.

ಅಲಿಪ್ತ ದೇಶಗಳ ಶೃಂಗ ಸಮ್ಮೇಳನದಲ್ಲಿ ಸುಮಾರು ನೂರು ದೇಶಗಳ ಪ್ರಮುಖ ನಾಯಕರು ಭಾಗವಹಿಸುತ್ತಾರೆ. ಅದರಲ್ಲಿ ಕ್ಯೂಬಾದ ಅಧ್ಯಕ್ಷ ಫೆಡೆಲ್ ಕ್ಯಾಸ್ಟ್ರೋ ಸಹ ಇದ್ದಾರೆ.

ಬಿಜಾಪುರ · ಬಳ್ಳಾರಿ ಘಟನೆಗಳ ಖಂಡನೆ

ಕೆಲವು ಜಾತೀಯವಾದಿ ಕಿಡಿಗೇಡಿಗಳು ರಾಜಕೀಯ ದುರುದ್ದೇಶದಿಂದ ತಾ. 17ರಂದು ಮಧ್ಯಾಹ್ನ ಮೂರು ಘಂಟೆಗೆ ಬಿಜಾಪುರ ನಗರದ ಮಧ್ಯದಲ್ಲಿರುವ ಕಿರಾಣಿ ಮಾರ್ಕೆಟ್ಟಿಗೆ ಬೆಂಕಿ ಹಚ್ಚಿ ನೂರಕ್ಕೂ ಹೆಚ್ಚು ಅಂಗಡಿಗಳನ್ನು ಸುಟ್ಟುಹಾಕಿ ಒಂದು ಕೋಟಿ ರೂ. ಹಾನಿ ಉಂಟುಮಾಡಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಬಲವಾಗಿ ಖಂಡಿಸುತ್ತದೆ. ಹಾನಿಗೊಳಗಾದ ವ್ಯಾಪಾರಸ್ಥರಿಗೆಲ್ಲ ಸಹಾನುಭೂತಿಯನ್ನು ತೋರಿಸಿ, ಹಾನಿಗೊಳಗಾದವರಿಗೆ ಪರಿಹಾರ ಧನ ಸಹಾಯ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತದೆ.

ಬಳ್ಳಾರಿಯಲ್ಲಿ ಏಳು ವಯಸ್ಸಿನ ಹುಡುಗಿಯ ಮೇಲೆ 6 ಜನ ಪೋಲೀಸರು ಅತ್ಯಾಚಾರ ಮಾಡಿದ್ದು, ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲೆಂಬ ನೆಪದಿಂದ ಲೂಟಿ, ಬೆಂಕಿ ಹಚ್ಚುವ ಕೆಲಸ ಮಾಡಿದ ಕಿಡಿಗೇಡಿಗಳ ದುಷ್ಕೃತ್ಯವನ್ನು ಪಾರ್ಟಿ ಖಂಡಿಸುತ್ತದೆ. ಹಾಗೆಯೇ ದಂಗೆ ನಡೆದಾಗ ಯಾವ ಎಚ್ಚರಿಕೆ ಕ್ರಮ ಕೈಗೊಳ್ಳದೆ ಪೋಲೀಸರು ಗೋಲೀಬಾರು ಮಾಡಿ 7 ಜನ ಗೋಲಿಗಾಹುತಿಯಾಗುವಂತೆ ಮಾಡಿರುವುದನ್ನು ಬಲವಾಗಿ ಖಂಡಿಸಿ, ಮೃತಪಟ್ಟವರ ಕುಟುಂಬದವರಿಗೆಲ್ಲ ಸಂತಾಪ ವ್ಯಕ್ತಮಾಡಿ, ಹಾನಿಗೊಳಗಾದವರಿಗೆಲ್ಲ ಯೋಗ್ಯ ಪರಿಹಾರ ಒದಗಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತದೆ.

ಸಂಪಾದಕೀಯ

ರಾಜ್ಯದಲ್ಲಿ ನಡೆದಿರುವ ದಂಗೆಗಳು

ಹೆಗಡೆ ಸರಕಾರ ಅಧಿಕಾರಕ್ಕೆ ಬಂದ ಒಂದೂವರೆ ತಿಂಗಳೊಳಗಾಗಿಯೇ ಜಾತೀಯವಾದಿಗಳೂ, ಕಾಂಗ್ರೆಸ್ ಪರಜನರೂ ಬಿಜಾಪುರ, ಬಳ್ಳಾರಿ, ಬೆಂಗಳೂರುಗಳಲ್ಲಿ ಗಲಭೆಗಳನ್ನುಂಟುಮಾಡುತ್ತಿದ್ದಾರೆ. ಜಾತೀಯ ದ್ವೇಷ ಬೆಳೆಸುತ್ತಿದ್ದಾರೆ. ಖಾಸಗಿ ಹಾಗೂ ಸಾರ್ವಜನಿಕ ಆಸ್ತಿಗಳಿಗೆ ಹಾನಿಯನ್ನುಂಟುಮಾಡುತ್ತಿದ್ದಾರೆ.

ಬಿಜಾಪುರದಲ್ಲಿ ವಿಶ್ವಹಿಂದೂ ಪರಿಷತ್, ಆರ್. ಎಸ್. ಎಸ್, ಬಿ.ಜೆ.ಪಿ. ಪರ ಮುಖಂಡರೂ, ಕಾಂಗ್ರೆಸ್, ಲೀಗ್‌ಪರ ಮುಸ್ಲಿಂ ಜನರೂ ಜಾತೀಯ, ಮತೀಯ ದ್ವೇಷಕ್ಕೆ ಎಡೆ ಮಾಡಿಕೊಟ್ಟು ಕ್ಷುಲ್ಲಕ ಕಾರಣಗಳನ್ನು ಗುಡ್ಡವನ್ನಾಗಿ ಮಾಡಿ ಕೋಟ್ಯಾವಧಿ ರೂ. ಹಾನಿಯಾಗುವಂತೆ ಇಡೀ ಮಾರ್ಕೆಟ್ಟನ್ನೇ ಸುಟ್ಟು ಹಾಕುತ್ತಿದ್ದಾರೆ.

ಬಳ್ಳಾರಿಯಲ್ಲಿ ಹುಡುಗಿಯ ಮೇಲೆ ನಡೆದ ಅತ್ಯಾಚಾರಕ್ಕೆ ಪ್ರತಿಭಟನೆಯನ್ನು ಪೋಲೀಸರ ಮೇಲಷ್ಟೇ ಸೀಮಿತಗೊಳಿಸದೆ, ಪೋಲೀಸರ ಆಶ್ರಯದಿಂದ ಮಟಕಾದಂತ ಹೀನಾಯ ಕೃತ್ಯದಲ್ಲಿ ತೊಡಗಿರುವ ಎರಡು ಗುಂಪುಗಳು ಪೋಲೀಸರ ಅತ್ಯಾಚಾರದ ನೆವದಿಂದ ಖಾಸಗಿ ಹಾಗೂ ಸರಕಾರಿ ಆಸ್ತಿಪಾಸ್ತಿಗೆ ಹಾನಿಯನ್ನುಂಟುಮಾಡಿ ಗೋಲೀಬಾರಿಗೆ ಅವಕಾಶ ಮಾಡಿಕೊಟ್ಟು ಏಳಕ್ಕಿಂತಲೂ ಹೆಚ್ಚು ನಿರಪರಾಧಿಗಳ ಮರಣಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಬೆಂಗಳೂರಿನಲ್ಲಿ ಯಾವ ಕಾರಣವೂ ಇಲ್ಲದೆ ಸರಕಾರಿ ಬಸ್ಸುಗಳನ್ನು ಸುಟ್ಟು ಹಾಕಿದ್ದಾರೆ.

ಕಿಡಿಗೇಡಿಗಳ, ಸಮಾಜ ದ್ರೋಹಿಗಳ ಇಂಥ ದುಷ್ಕೃತ್ಯಗಳನ್ನು ಖಂಡಿಸದೆ, ಕಾಂಗ್ರೈ ಮುಖಂಡರಾದ ವೀರಪ್ಪ ಮೊಯಿಲಿಯಂಥವರು, ಜನತಾ ಸರಕಾರದ ಆಡಳಿತೆಯಲ್ಲಿ ಕ್ಯಾದೆ ಸುವ್ಯವಸ್ಥೆ ಕುಸಿದುಬಿದ್ದಿದೆ ಎಂಬ ಆರೋಪ ಹೊರಿಸುತ್ತಿದ್ದಾರೆ. ಅಂಥ ಹೇಳಿಕೆಗಳಿಂದ ದಂಗೆ ಮಾಡುವ, ಬೆಂಕಿ ಹಚ್ಚುವ ದುಷ್ಕರ್ಮಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ವಿಧಾನ ಸಭೆಯ ಇತ್ತೀಚಿನ ಚುನಾವಣೆಯಲ್ಲಿ ಬಿ.ಜೆ.ಪಿ.ಯ ವಿಜಯ ಒಂದು ಕಡೆ ಹಿಂದೂ ಮತಾಂಧರಿಗೆ ಪ್ರೋತ್ಸಾಹ ನೀಡುತ್ತಿದ್ದಂತೆಯೇ ಇದನ್ನೆದುರಿಸಲು ಮುಸ್ಲಿಂ ಜಾತೀಯ ವಾದಿಗಳು ಅಣಿಯಾಗುತ್ತಿರುವುದು ಕಂಡು ಬರುತ್ತಿದೆ, ಕಾಂಗ್ರೈ ಮುಖಂಡರೂ ಇತರ ಪಟ್ಟಭದ್ರ ಹಿತಾಸಕ್ತಿಗಳೂ ಇಂಥವರಿಗೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಬೆಂಬಲ ತೋರಿಸುತ್ತಿದ್ದಾರೆ. ಕ್ಯಾದೆ–ಕಾನೂನು ಅವ್ಯವಸ್ಥೆಗೊಂಡು ಶಾಂತಿಯುತ ಸಮಾಜ ಜೀವನ ಹಾಳಾಗುವಂತೆ ಮಾಡುತ್ತಿದ್ದಾರೆ. ಇದಕ್ಕೆಲ್ಲ ಪೂರಕವಾಗಿ ಪೊಲೀಸ ಖಾತೆಯಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳೂ, ಬೆಂಕಿಗೆ ಎಣ್ಣೆ ಹಾಕುವ ಕಾರ್ಯ ಮಾಡುತ್ತಿದ್ದಾರೆ.

(8ನೇ ಪುಟ ನೋಡಿ)

ಪಾಕಿಸ್ತಾನದ ಆರ್ಥಿಕ ದುಃಸ್ಥಿತಿ

ಆರ್. ಚಂದ್ರ

ಆರ್ಥಿಕ ಸಮೀಕ್ಷೆ :

ಭಾರತದೊಂದಿಗೇ 1947 ರಲ್ಲಿ ಸ್ವಾತಂತ್ರ್ಯಗೊಂಡ ಪಾಕಿಸ್ತಾನ ಇಂದು ಭೀಕರ ಆರ್ಥಿಕ, ರಾಜಕೀಯ ದುಃಸ್ಥಿತಿಗೊಳಗಾಗಿದೆ. ಭೂಮಾಲಿಕ ಪದ್ಧತಿಯನ್ನು ಸಂಪೂರ್ಣವಾಗಿ ಅಳಿಸದೆ, ವಿದೇಶಿ ನೆರವಿನಿಂದ ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯ ದಾರಿ ಹಿಡಿದ ಪಾಕಿಸ್ತಾನ ತನ್ನ ಆಂತರಿಕ ವೈರುಧ್ಯಗಳಿಂದಬಂದಾದ ಮೇಲೊಂದು ದುಃಸ್ಥಿತಿಗೊಳಗಾಗುತ್ತಿದೆ.

ಈ ದೇಶದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಸಂಪತ್ತು ಮಾದರಿ ಪ್ರಜಾಪ್ರಭುತ್ವವು (Parliamentary Democracy) ಸ್ಥಿರವಾಗಿ ನಿಲ್ಲದೆ ಅಂದಿನಿಂದ ಇಂದಿನವರೆಗೆ ಹೆಚ್ಚಿನ ಕಾಲಾವಧಿಯಲ್ಲಿ ಮಿಲಿಟರಿ ಸರ್ವಾಧಿಕಾರಿ ಆಳ್ವಿಕೆಯೇ ಮುಂದುವರಿಯುತ್ತಿದೆ. ಬಂಗಾಳಿ, ಸಿಂಧಿ, ಪಂಜಾಬಿ, ಬಲೂಚಿ ಮುಂತಾದ ಬಹುರಾಷ್ಟ್ರೀಯತೆಗಳ ಒಕ್ಕೂಟವಾದ ಪಾಕಿಸ್ತಾನ ತನ್ನ ಆರ್ಥಿಕ ಸಾಮಾಜಿಕ ತಳಪಾಯದಲ್ಲಡಗಿದ ವೈರುಧ್ಯಗಳಿಂದಾಗಿ ಒಕ್ಕೂಟದ ಎಲ್ಲಾ ರಾಷ್ಟ್ರೀಯತೆಗಳ ಜನರ ಹಿತಾಸಕ್ತಿಗಳನ್ನು ಸಮಾನವಾಗಿ ನಿಷ್ಪಕ್ಷಪಾತವಾಗಿ ಕಾಯ್ದುಕೊಂಡು ಬರಲು ಸೋತಿದೆ. 12 ವರ್ಷಗಳ ಹಿಂದೆ ಆರ್ಥಿಕ ರಾಜಕೀಯ ಸಾಂಸ್ಕೃತಿಕ ಶೋಷಣೆ ಮತ್ತು ತುಳಿತಕ್ಕೊಳಗಾದಮತ್ತು ನಾಗರಿಕ ಹಕ್ಕುಗಳಿಂದಲೂ ವಂಚಿತರಾದ ಪೂರ್ವ ಬಂಗಾಳದ ಜನರು ಒಕ್ಕೂಟದಿಂದ ಸಿಡಿದು ಬಾಂಗ್ಲಾದೇಶವಾಗಿ ಸ್ವತಂತ್ರವಾದರು. ಒಕ್ಕೂಟದ ಉಳಿದ ಭಾಗದಲ್ಲಿಯೂ, ವಾಯುವ್ಯ ಗಡಿಪ್ರಾಂತ್ಯದ ಬಲೂಚಿಸ್ತಾನ ಹಾಗೂ ಇತರ ಗುಡ್ಡಗಾಡು ಪ್ರದೇಶಗಳಲ್ಲಿನ ಜನರೂ ಅತೃಪ್ತಿಯಿಂದ ಕುದಿಯುತ್ತಿದ್ದಾರೆ, ಅವರ ರಾಷ್ಟ್ರೀಯತೆಗಳ ಉಪರಾಷ್ಟ್ರೀಯತೆಗಳ ರಕ್ಷಣೆಗಾಗಿ ಒಕ್ಕೂಟದ ವಿರುದ್ಧವಾಗಿ ಹೋರಾಡುತ್ತಿದ್ದಾರೆ. ಆದರೆ, ಒಕ್ಕೂಟದ ಮಿಲಿಟರಿ ಆಳ್ವಿಕೆ ಇವರ ಮೇಲೆ ಸಶಸ್ತ್ರ ಧಾಳಿ ನಡೆಸುತ್ತಿದೆ. ಒಕ್ಕೂಟ ಪುನಃ ಒಡೆಯುವ ಅಪಾಯ ಹೆಚ್ಚುತ್ತಿದೆ.

ಪಾಕಿಸ್ತಾನದಲ್ಲಿ ವಿವಿಧ ರಾಷ್ಟ್ರೀಯತೆಗಳೊಳಗಿನ, ಜಾತಿ ಮತ ಧರ್ಮಗಳೊಳಗಿನ ಐಕ್ಯತೆ, ಅನ್ಯೋನ್ಯತೆ, ಸಹಕಾರ ಸಹಿಷ್ಣುತೆ, ಅಳಿಸಿಹೋಗುತ್ತಿದೆ. ಮುಸ್ಲಿಂ ಮತಾಂಧತೆಯನ್ನು ಪ್ರಚೋದಿಸಿ, ಮಿಲಿಟರಿ ಸರ್ವಾಧಿಕಾರ ತನ್ನ ಸ್ಥಾನ ಭದ್ರಗೊಳಿಸುತ್ತಿದೆ. ಭಾರತ ವಿರೋಧಿ, ಸಮಾಜವಾದಿ ವಿರೋಧಿ ಧೋರಣೆಗಳಿಂದ ಅಮೆರಿಕ ಮತ್ತು ಐರೋಪ್ಯ ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗುತ್ತಿದೆ. ಭಾರತ ಹಾಗೂ ರಷ್ಯಾ ವಿರುದ್ಧ ಅಮೇರಿಕದ ಮಿಲಿಟರಿ ಕೂಟಕ್ಕೆ ಪಾಕಿಸ್ತಾನ ಸೇರಿದೆ. ತನ್ನ ದೇಶದಲ್ಲಿ ಅಮೇರಿಕದ ಮಿಲಿಟರಿ ನೆಲೆಯನ್ನು ಸ್ಥಾಪಿಸಲು ಅನುಕೂಲ ಮಾಡಿಕೊಟ್ಟಿದೆ. ಆರ್ಥಿಕ ಅಭಿವೃದ್ಧಿಗಿಂತಲೂ ರಕ್ಷಣೆಗೆ ಹೆಚ್ಚು ಸಂಪನ್ಮೂಲಗಳನ್ನು ವಿನಿಯೋಗಿಸುತ್ತಿರುವುದರಿಂದ ದೇಶದಲ್ಲಿ ಬಡತನ, ದಾರಿದ್ರ್ಯ, ನಿರುದ್ಯೋಗ, ಹಣದುಬ್ಬರ, ಕೈಗಾರಿಕಾ ಹಿನ್ನಡೆ, ನಿರಕ್ಷರತೆ ಇತ್ಯಾದಿ ಸಮಸ್ಯೆಗಳು ತಾಂಡವವಾಡುತ್ತಿದೆ.

ಪಾಕಿಸ್ತಾನದ ಎಲ್ಲಾ ವೈರುಧ್ಯಗಳೂ ಇಂದು ಹೆಡೆ ಎತ್ತಿ ನಿಂತಿದೆ. ಶ್ರೀಮಂತರ ಭೋಗಜೀವನ ಒಂದೆಡೆ, ಬಡವರ ಗುಡಿಸಲುಗಳು ಇನ್ನೊಂದೆಡೆ, ಆಳುವವರ ಸಾಮ್ರಾಜ್ಯಶಾಹಿ ವೈಖರಿಯ ವೈಭವೋಪೇತ ಜೀವನ ಒಂದೆಡೆ, ಜನಸಾಮಾನ್ಯರ ಕಡುಬಡತನ, ದಾರಿದ್ರ್ಯ ಇನ್ನೊಂದೆಡೆ. ಅತ್ಯಾಧುನಿಕ ಯಂತ್ರೋಪಕರಣಗಳ ಬಳಕೆ ಒಂದೆಡೆ, ಆಡಳಿತದಲ್ಲಿ ಅದಕ್ಷತೆ ಇನ್ನೊಂದೆಡೆ. ಮೂರನೇ ಜಗತ್ತಿನ ಅತ್ಯಂತ ಬಡ ರಾಷ್ಟ್ರಗಳಲ್ಲಿ ಪಾಕಿಸ್ತಾನವೂ ಒಂದಾಗಿದೆ. ಜೊತೆಗೇ, ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಗೆ ಪ್ರಮುಖ ಮಾರುಕಟ್ಟೆಯೂ ಆಗಿದೆ? ಇಸ್ಲಾಮಿಕ್ ಅಣುಬಾಂಬು ತಯಾರಿಯಲ್ಲಿಯೂ ಇದೆ.

ಪಾಕಿಸ್ತಾನದ ಆರ್ಥಿಕ ದುಃಸ್ಥಿತಿಗಳನ್ನು ಸ್ಪಷ್ಟಪಡಿಸುವ ಕೆಲವು ವಿಷಯಗಳನ್ನು ಈ ಸಮೀಕ್ಷೆಯಲ್ಲಿ ಓದುಗರ ಗಮನಕ್ಕೆ ತರಲಾಗಿದೆ. ಈ ಕುರಿತು ಅಂಕಿ ಅಂಶಗಳನ್ನು ಪಾಕಿಸ್ತಾನದ ವಿರೋಧ ಪಕ್ಷಗಳ ಸಂಯುಕ್ತ ರಂಗದ ನಾಯಕ ಏರ್ ಮಾರ್ಷಲ್ ಅಸಘರ್ ಅವರ ತಾ. 16–1–83ರ ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ ಪ್ರಕಟವಾದಲೇಖನ ಒಂದರಿಂದ ಆರಿಸಲಾಗಿದೆ.

ಅಳಿಯದ ಭೂಮಾಲಕ ಪದ್ಧತಿ :

ಪಾಕಿಸ್ತಾನ ಸ್ವಾತಂತ್ರ್ಯಗೊಂಡಾಗ ಪಶ್ಚಿಮ ಪಂಜಾಬ್, ಸಿಂಧ್ ಮತ್ತು ವಾಯುವ್ಯ ಗಡಿ ಪ್ರಾಂತ್ಯಗಳಲ್ಲಿ 80 ದೊಡ್ಡ ಜಮೀನುದಾರರ ಕುಟುಂಬಗಳು ಮೂರು ಮಿಲಿಯ ಎಕರೆ ವ್ಯವಸಾಯ ಭೂಮಿಯ ಒಡೆತನ ಹೊಂದಿದ್ದು, ಆ ಪ್ರದೇಶದ ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ತಮ್ಮ ಏಕಸ್ವಾಮ್ಯ ಸ್ಥಾಪಿಸಿದ್ದವು. 12 ವರ್ಷಗಳ ನಂತರ ಮಿಲಿಟರಿ ಸರ್ವಾಧಿಕಾರಿ ಅಯೂಬ್ ಖಾನರ ಆಳ್ವಿಕೆಯಲ್ಲಿ ಮೊತ್ತಮೊದಲು ಜಾರಿಗೆ ಬಂದ ಭೂ ಸುಧಾರಣಾ ಕಾಯಿದೆಯಂತೆ ಪ್ರತಿಒಬ್ಬನ ಭೂಸ್ವಾಮ್ಯವನ್ನು 500 ಎಕರೆ ನಿರಾವರಿ ಅಥವಾ 1000 ಎಕರೆ ನೀರಾವರಿಯೇತರ ಭೂ ಹಿಡುವಳಿಗೆ ಸೀಮಿತಗೊಳಿಸಲಾಗಿತ್ತು. ಮುಂದೆ 1972ರಲ್ಲಿ ಪ್ರಧಾನಿಭುಟ್ಟೋ ಆಳ್ವಿಕೆಯಲ್ಲಿ ಜಾರಿಗೆ ಬಂದ ಭೂ ಮಸೂದೆಯಲ್ಲಿ ಪ್ರತಿಒಬ್ಬನ ಭೂಸ್ವಾಮ್ಯವನ್ನು 150 ಎಕರೆ ನೀರಾವರಿ ಅಥವಾ 300 ಎಕರೆ ನೀರಾವರಿಯೇತರ ಭೂ ಹಿಡುವಳಿಗೆ ಇಳಿಸಲಾಯಿತು. ಆದರೆ, ಈ ದೀರ್ಘಾವಧಿಯಲ್ಲಿ ಭೂ ಮಸೂದೆಯಿಂದ ತಪ್ಪಿಸಿಕೊಳ್ಳುವ ಸರ್ವ ಪ್ರಯತ್ನಗಳನ್ನೂ ದೊಡ್ಡ ಭೂಮಾಲಿಕರು ಮಾಡಿಕೊಂಡು ಯಶಸ್ವಿಯಾಗಿದ್ದರು. ದೇಶದ ಒಟ್ಟು 50 ಮಿಲಿಯ ಎಕರೆಗಳಿಗೂ ಮೀರಿ ಇರುವ ವ್ಯವಸಾಯ ಭೂಮಿಯಲ್ಲಿ ಈ ಎರಡು ಕಾಯಿದೆಗಳಿಂದ ಕೇವಲ 5 ಮಿಲಿಯ ಎಕರೆಗಳಷ್ಟು ಭೂ ಹಿಡುವಳಿಗಳ ಮೇಲೆ ಪರಿಣಾಮವಾಗಿತ್ತು. ಅಂದರೆ ಶೇ. 10ರಷ್ಟು ಮಾತ್ರ! ಅದರಲ್ಲಿಯೂ ಸರಕಾರ ಸ್ವಾಧೀನಪಡಿಸಿಕೊಂಡ ಭೂಮಿಯು 0.5 ಮಿಲಿಯ ಎಕರೆಗಳಷ್ಟೇ ಆಗಿತ್ತು, ಅಂದರೆ ಶೇ. 1ರಷ್ಟುಮಾತ್ರ! ಪರಿಣಾಮವಾಗಿ ಪಾಕಿಸ್ತಾನದಲ್ಲಿ ಭೂಮಾಲಕ ಪದ್ಧತಿ ಇನ್ನೂ ಅಳಿಯದೇ ಉಳಿದಿದೆ.

ಹೆಚ್ಚುತ್ತಿರುವ ರಕ್ಷಣಾ ವೆಚ್ಚ :

ಪಾಕಿಸ್ತಾನದಲ್ಲಿ ದೀರ್ಘಕಾಲದ ಮಿಲಿಟರಿ ಸರ್ವಾಧಿಕಾರದ ಮೂಲಾಧಾರಗಳಲ್ಲಿ ಭಾರತ ವಿರೋಧಿ ಧೋರಣೆಯೂ ಒಂದಾಗಿದ್ದು, ಭಾರತದೊಂದಿಗೆ ಅನವಶ್ಯಕವಾಗಿ 1948, 1966 ಮತ್ತು 1971ರಲ್ಲಿ ಯುದ್ಧಗಳು ಸಂಭವಿಸಿದವು. ಅಮೇರಿಕದ ಮಿಲಿಟರಿ ಒಕ್ಕೂಟದ ಸದಸ್ಯ ರಾಷ್ಟ್ರವಾಗಿ ಅದರ ಮಿಲಿಟರಿ ನೆಲೆ ಸ್ಥಾಪಿಸಲು ಅನುಮತಿ ನೀಡಲಾಯಿತು. ಭಾರೀ ಶಸ್ತ್ರಾಸ್ತ್ರಗಳ ಸಂಗ್ರಹಣೆಯಿಂದಾಗಿ ಭಾರತ ಉಪಖಂಡದಲ್ಲಿ ಶಾಂತಿ, ಸಹಕಾರ, ಸಹಬಾಳ್ವೆಯ ಬದಲು ನಿರಂತರ ಯುದ್ಧ ಭೀತಿ ತಲೆದೋರಿತು. ಈ ದೇಶದಲ್ಲಿ ರಾಷ್ಟ್ರೀಯ ಹಾಗೂ ಪ್ರಾದೇಶಿಕಜನತಾ ಪ್ರಾತಿನಿಧ್ಯದ ಸರಕಾರಗಳಿಲ್ಲದಿರುವುದರಿಂದ ಪತ್ರಿಕಾ ಸೆನ್ಸಾರ್ ಮತ್ತು ರಾಜಕೀಯ ಚಟುವಟಿಕೆಗಳ ಮೇಲಿನ ನಿರ್ಬಂಧ ಇರುವುದರಿಂದ, ನಿರ್ದಯ ಮಿಲಿಟರಿ ಸರ್ವಾಧಿಕಾರ ಇರುವುದರಿಂದ "ರಕ್ಷಣೆ"ಗೆ ಮಿತಿಮೀರಿ ಸಂಪನ್ಮೂಲಗಳನ್ನು ವ್ಯಯಿಸಲಾಗುತ್ತಿದೆ. ಕೇಳುವವರಿಲ್ಲ, ಹೇಳುವವರಿಲ್ಲ, ಅನಭಿವೃದ್ಧಿಯ ವೆಚ್ಚವು ಅನಿಯಂತ್ರಿತವಾಗಿ ಹೆಚ್ಚುತ್ತಿರುವುದರಿಂದ ಆರ್ಥಿಕ ಅಭಿವೃದ್ಧಿ ಸ್ಥಗಿತಗೊಂಡು ಬಡತನ, ನಿರುದ್ಯೋಗ, ವಿದೇಶಿಸಾಲ, ಹಣದುಬ್ಬರ ಸಮಸ್ಯೆಗಳೂ ಹೆಚ್ಚುತ್ತಿವೆ.

ಪಾಕಿಸ್ತಾನದ ಪ್ರಜೆಗಳ ಸರಾಸರಿ ರಕ್ಷಣಾ ವೆಚ್ಚವು ಪ್ರಪಂಚದಲ್ಲೇ ಅತ್ಯಧಿಕ ! 1970–71ರಲ್ಲಿ ಅವಿಭಾಜ್ಯ ಪಾಕಿಸ್ತಾನದ ರಕ್ಷಣಾ ವೆಚ್ಚವು ರೂ 320 ಕೋಟಿಯಾಗಿತ್ತು. ಬಾಂಗ್ಲಾ ವಿಮೋಚನೆಯ 11 ವರ್ಷಗಳ ನಂತರ 1981–82ರಲ್ಲಿ ಪಾಕಿಸ್ತಾನದ ರಕ್ಷಣಾ ವೆಚ್ಚವು ರೂ. 1950 ಕೋಟಿಗೇರಿ ಆರುಪಟ್ಟು ಹೆಚ್ಚಾಯಿತು ! ಹಾಗೆಯೇ ಕೇಂದ್ರ ಸರಕಾರದ ಇತರ ಅನಭಿವೃದ್ಧಿ ವೆಚ್ಚವು ಈ ಅವಧಿಯಲ್ಲಿ ರೂ. 5.6 ಕೋಟಿಯಿಂದ ರೂ. 550ಕೋಟಿಗೇರಿ ನೂರುಪಾಲು ಹೆಚ್ಚಾಯಿತು! 1981–82ರಲ್ಲಿ ಕೇಂದ್ರ ಸರಕಾರದ ಒಟ್ಟು ರೂ. 4380 ಕೋಟಿ ವೆಚ್ಚದಲ್ಲಿ ಶೇ. 46ರಷ್ಟು ರಕ್ಷಣೆಗೂ, ಶೇ. 13ರಷ್ಟು ಆಡಳಿತ ಮತ್ತಿತರ ಅನಭಿವೃದ್ಧಿ ವೆಚ್ಚಕ್ಕೂ ವಿನಿಯೋಗವಾಗಿ, ಅಭಿವೃದ್ಧಿ ಕಾರ್ಯಗಳಿಗೆ ಕೇವಲ ಶೇ. 41ರಷ್ಟು ಸಿಗುವುದು.

ಆರ್ಥಿಕ ಅಭಿವೃದ್ಧಿಯಲ್ಲಿ ಹಿನ್ನಡೆ:

ಪಾಕಿಸ್ತಾನದ ಜನರ ಈಗಿನ ಸರಾಸರಿ ವಾರ್ಷಿಕ ಆದಾಯವು 1960ರ ಬೆಲೆಗಳಲ್ಲಿ ರೂ. 681 ಆಗಿದ್ದು ಪ್ರಪಂಚದ ರಾಷ್ಟ್ರಗಳಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ. ಜನೋಪಯೋಗದ ಅತ್ಯಂತ ಮುಖ್ಯ ಬೆಳೆ ಗೋಧಿ ಉತ್ಪಾದನೆ ಎಕರೆ ಒಂದಕ್ಕೆ ಪ್ರಪಂಚದಲ್ಲಿಯೇ ಅತ್ಯಂತ ಕಡಿಮೆಯಾಗಿದೆ. ಪ್ರತಿವರ್ಷವೂ ಈ ದೇಶ ಮಳೆ ಗಾಳಿಯಿಂದ ಒಂದು ಲಕ್ಷ ಎಕರೆ ವ್ಯವಸಾಯಭೂಮಿಯನ್ನು ಕಳೆದುಕೊಳ್ಳುತ್ತಿದೆ. ಜನಸಂಖ್ಯೆ ಅನಿಯಂತ್ರಿತವಾಗಿ ವಾರ್ಷಿಕ ಶೇ. 3ರ ದರದಲ್ಲಿ ಹೆಚ್ಚುತ್ತಿದ್ದು, ಪಾಕಿಸ್ತಾನದ 1980ರ 8 ಕೋಟಿ ಜನಸಂಖ್ಯೆ 1986ರಲ್ಲಿ 10 ಕೋಟಿಗೇರಿ 91ರಲ್ಲಿ 12ಕೋಟಿ ದಾಟಿ ಈ ಶತಮಾನಾಂತ್ಯದಲ್ಲಿ 15.5 ಕೋಟಿಗೆ ಮುಟ್ಟುವ ಸಂಭವವಿದೆ. ಇಷ್ಟೊಂದು ಜನಸಂಖ್ಯೆಗೆ ಊಟ, ವಸತಿ, ವಿದ್ಯೆ, ಉದ್ಯೋಗ, ಆರೋಗ್ಯ ಸೌಲಭ್ಯಗಳನ್ನೊದಗಿಸುವುದೆಂದರೆ ಹಿಮಾಲಯದಷ್ಟು ಭಾರದ ಹೊಣೆಗಾರಿಕೆ. ಆದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು 1981–82ರಲ್ಲಿ ತಮ್ಮ ಒಟ್ಟು ವೆಚ್ಚದಲ್ಲಿ ಶಿಕ್ಷಣಕ್ಕೆ ರೂ. 372 ಕೋಟಿ (ಶೇ. 6.5) ವಸತಿಗೆ ರೂ. 19.2 ಕೋಟಿ (ಶೇ 0.4) ಮತ್ತು ಆರೋಗ್ಯಕ್ಕೆ ರೂ 93.7 ಕೋಟಿ (ಶೇ 1.6) ಮಾತ್ರ ಮೀಸಲಾಗಿಟ್ಟಿವೆ. ಪರಿಣಾಮವಾಗಿ ಮುಂದಿನ ವರ್ಷಗಳಲ್ಲಿ ಆರ್ಥಿಕ ಅಭಿವೃದ್ಧಿ, ಜನಜೀವನ ಮಟ್ಟ ಇನ್ನಷ್ಟು ಇಳಿಮುಖವಾಗುವುದು.

ವಿದೇಶೀ ಸಾಲದ ಭಾರ :

ಪಾಕಿಸ್ತಾನದಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿನ ಮೇಲೆಯೂ ರೂ 2000 ದಷ್ಟು ವಿದೇಶೀ ಸಾಲದ ಭಾರವಿದೆ! 1977ರಲ್ಲಿ ವಿದೇಶೀ ಸಾಲ ಬಾಕಿ ರೂ 6300 ಕೋಟಿ ಇದ್ದುದು 1981ರಲ್ಲಿ ರೂ 13000 ಕೋಟಿಗೇರಿತು. ನಾಲ್ಕು ವರ್ಷಗಳಲ್ಲಿ ಇಮ್ಮಡಿ ಆಯಿತು. ರಕ್ಷಣಾ ವೆಚ್ಚಕ್ಕೆ ಪ್ರತ್ಯೇಕವಾಗಿ 1981ರಲ್ಲಿ ರೂ 3000 ಕೋಟಿ ವಿದೇಶಿ ಸಾಲ. ಒಟ್ಟು ವಿದೇಶಿ ಸಾಲದ ಶೇ 25ರಷ್ಟು ರಕ್ಷಣಾ ವೆಚ್ಚಕ್ಕೆ ಮೀಸಲು ! ಅಮೇರಿಕದಿಂದ ಸಾಲ ರೂ 3200 ಕೋಟಿ, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲ ರೂ 1700 ಕೋಟಿ ಮತ್ತು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಿಂದ ಸಾಲ ರೂ 1170 ಕೋಟಿ. ಈ ದೇಶದ ಪ್ರತಿವರ್ಷದ ರಫ್ತುಗಳಿಕೆಯ ಶೇ 25ರಷ್ಟು ಬಡ್ಡಿ ಸಹಿತ ವಿದೇಶಿ ಸಾಲ ಮರು ಪಾವತಿಗೇ ವಿನಿಯೋಗವಾಗುವುದು. 1981ರಲ್ಲಿ ರಕ್ಷಣಾ ಸಾಲ ಬಿಟ್ಟು ಆರ್ಥಿಕ ವಿದೇಶಿ ಸಾಲ ಮತ್ತು ಬಡ್ಡಿ ಪಾವತಿಯ ಮೊತ್ತ ರೂ 675 ಕೋಟಿಯಷ್ಟಾಗಿದ್ದು, ಆ ವರ್ಷ ಪಡೆದ ವಿದೇಶಿ ಸಾಲದ ಶೇ 69 ರಷ್ಟಾಗಿತ್ತು !

ಸಾಲದ ಭಾರ ಹೆಚ್ಚಾದಂತೆ, ರಫ್ತುಗಳಿಗೆ ಮತ್ತು ಹೊಸ ವಿದೇಶಿ ಸಾಲ ಎಲ್ಲವೂ ಹಳೆಯ ವಿದೇಶಿಸಾಲ ಹಾಗೂ ಬಡ್ಡಿ ತೀರಿಸುವುದಕ್ಕೇ ವಿನಿಯೋಗವಾಗುವುದು. ಆರ್ಥಿಕ ಅಭಿವೃದ್ಧಿಗೆ ಕೃಷಿ ಕೈಗಾರಿಕೆಗಳಿಗೆ ಅಗತ್ಯವಾದ ಆಮದು ಮಾಡಿಕೊಳ್ಳಲು ಮತ್ತು ಆಂತರಿಕ ಬಂಡವಾಳ ಹೂಡಲು ಸಂಪನ್ಮೂಲದ ತೀವ್ರಕೊರತೆ ಉದ್ಭವಿಸಿದೆ. ಈ ದುಃಸ್ಥಿತಿಯನ್ನು ದುರುಪಯೋಗಿಸಿಕೊಂಡು ಅಮೇರಿಕ ಮತ್ತಿತರ ಬಂಡವಾಳಶಾಹಿ ರಾಷ್ಟ್ರಗಳು, ಅವುಗಳ ಬಹುರಾಷ್ಟ್ರೀಯ ಸಂಸ್ಥೆಗಳು ಪಾಕಿಸ್ತಾನದಂತಹ ದುರ್ಬಲ ದೇಶದಲ್ಲಿ ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ವೃದ್ಧಿಸಿಕೊಂಡು, ತಮಗನುಕೂಲವಾದ ಕೈಗೊಂಬೆ ಸರಕಾರವನ್ನು ಸ್ಥಾಪಿಸಿ ಮುಂದುವರಿಸಲು ಪ್ರಯತ್ನಿಸುತ್ತಿವೆ. ದೇಶದ, ಉಪಖಂಡದ ಹಿತಸಾಧನೆಗಳಿಗೆ, ಐಕ್ಯ ಶಾಂತಿಗೆ ಮಾರಕವಾಗುತ್ತಿವೆ.

ತೆರಿಗೆಯ ಭಾರ :

ಸರಕಾರದ ರಕ್ಷಣಾ ವೆಚ್ಚ, ಆಡಳಿತ ವೆಚ್ಚ ಮತ್ತು ಆರ್ಥಿಕ ಅಭಿವೃದ್ಧಿಯ ವೆಚ್ಚವನ್ನು ನೀಗಿಸಲು ಜನಕೋಟಿಯ ಮೇಲೆ ಸಹಿಸಲಾರದಷ್ಟು ತೆರಿಗೆಯ ಭಾರ ಹೊರಿಸಲಾಗುತ್ತಿದೆ. 1982-83ರ ನಿರೀಕ್ಷೆಯಂತೆ, ಒಟ್ಟು ರೂ 4430 ಕೋಟಿ ರೂ ತೆರಿಗೆ ಸಂಗ್ರಹದಲ್ಲಿ ಶೇ 80 ರಷ್ಟು ಅಪ್ರತ್ಯಕ್ಷ ತೆರಿಗೆ, ಕೇವಲ ಶೇ 20 ರಷ್ಟು ಪ್ರತ್ಯಕ್ಷ ತೆರಿಗೆ. ಜನಸಾಮಾನ್ಯರು, ಬಡವರು, ಮಧ್ಯಮವರ್ಗದವರು ಬಳಸುವ 'ಸಾರಿಗೆ, ವಿದ್ಯುತ್, ಗ್ಯಾಸ್, ಸಕ್ಕರೆ, ಸೀಮೇ ಎಣ್ಣೆ, ಸಿಮೆಂಟ್, ತುಪ್ಪ, ತೈಲ, ಇತ್ಯಾದಿ ಜೀವನಾವಶ್ಯಕ ವಸ್ತುಗಳ ಮೇಲೆ ವಿಪರೀತ ಅಪ್ರತ್ಯಕ್ಷ ತೆರಿಗೆ. ಈ ಅಗತ್ಯ ವಸ್ತುಗಳ ಬೆಲೆಗಳಲ್ಲಿ ಸರಾಸರಿ ಶೇ 40ರಷ್ಟು ಅಪ್ರತ್ಯಕ್ಷ ತೆರಿಗೆಯ ಅಂಶವಿದೆ. ಕೊರತೆ ಹಣಸೃಷ್ಟಿಯೂ ಅಪ್ರತ್ಯಕ್ಷ ತೆರಿಗೆಯಾಗಿ ಪರಿಣಮಿಸಿ ಹಣದುಬ್ಬರಕ್ಕೆ ಕಾರಣವಾಗಿ ಜನರ ಗ್ರಾಹಕಶಕ್ತಿ ಕುಸಿಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಅರಬ್ ದೇಶಗಳಲ್ಲಿ ನೆಲೆಸಿರುವ ಪಾಕಿಸ್ತಾನಿಯರಿಂದ ವಿದೇಶಿ ವಿನಿಮಯದ ರವಾನೆಯೂ ಕಡಿಮೆಯಾಗುತ್ತಿದೆ. ಅವರು ಕೆಲಸ ಕಳೆದುಕೊಂಡು ಸ್ವದೇಶಕ್ಕೆ ಮರಳುತ್ತಿದ್ದಾರೆ. ಪರಿಣಾಮವಾಗಿ, ಆಂತರಿಕವಾಗಿ ತೆರಿಗೆಯ ಭಾರವೂ ಹೆಚ್ಚುತ್ತಿದೆ. ಪಾಕಿಸ್ತಾನದ ರೂಪಾಯಿ ಅಮೇರಿಕದ ಡಾಲರಿಗೆ ಸಂಬಂಧಿಸಿದಂತೆ ಅಪಮೌಲ್ಯಗೊಳ್ಳುತ್ತಿದೆ. ವಿದೇಶಿ ಸಾಲಗಾರರು ಮುಖ್ಯವಾಗಿ ಅಂತರ್ರಾಷ್ಟ್ರೀಯ ಹಣಕಾಸುಸಂಸ್ಥೆ, ಜಾಗತಿಕ ಬ್ಯಾಂಕು, ಅಮೇರಿಕ ತಮ್ಮ ಹೊಸಹೊಸ ಶರತ್ತುಗಳನ್ನು ಪಾಕಿಸ್ತಾನದ ಮೇಲೆ ಹೇರುತ್ತಿವೆ. ಪಾಕಿಸ್ತಾನದ ಸ್ವಾತಂತ್ರ್ಯ, ಸಾರ್ವಭೌಮತೆ, ಸ್ವಾವಲಂಬನೆಗಳಿಗೆ ಭಾರೀ ಅಪಾಯವಿದೆ!

ಕಲಿಯಲು ಪಾಠ :

ಪಾಕಿಸ್ತಾನದ ಆರ್ಥಿಕ ದುಃಸ್ಥಿತಿಯಿಂದ ಭಾರತವೂ ಸೇರಿದಂತೆ ಪ್ರತಿಒಂದು ಅಭಿವೃದ್ಧಿ ಹೊಂದುತ್ತಿರುವ ಮೂರನೇ ಜಗತ್ತಿನ ರಾಷ್ಟ್ರವೂ ಪಾಠ

(7ನೇ ಪುಟ ನೋಡಿ)

ಕರ್ನಾಟಕ ಚುನಾವಣೆ-ಒಂದು ವಿಶ್ಲೇಷಣೆ

ಕರ್ನಾಟಕ-ಆಂಧ್ರ ವಿಧಾನಸಭೆಗಳಿಗೆ ನಡೆದ ಚುನಾವಣೆಯ ಪರಿಣಾಮಗಳು ಶ್ರೀಮತಿ ಗಾಂಧಿ ಮತ್ತು ಅವರ ಕಾಂಗ್ರೆಸ್ ಪಕ್ಷವನ್ನು ಮಾತ್ರವಲ್ಲ ರಾಜಕೀಯ 'ಪಂಡಿತ'ರನ್ನೂ ಚಕಿತಗೊಳಿಸಿವೆ. ದೇಶದ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲವೆಬ್ಬಿಸಿದ ಈ ಚುನಾವಣೆಪರಿಣಾಮಗಳನ್ನ ಇನ್ನೂ ಸ್ವಲ್ಪ ಆಳವಾಗಿ ವಿಶ್ಲೇಷಿಸುವ ಅಗತ್ಯವಿದೆ. ಈ ಪರಿಣಾಮಗಳು ತೋರುವಷ್ಟು ತೀರಾ ಆಶ್ಚರ್ಯಕರವಾದ ಪರಿಣಾಮಗಳೇನೂ ಅಲ್ಲ. ಜೂನ್ 1980ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ (ಐ) ಪಕ್ಷ ಅಧಿಕಾರಕ್ಕೆ ಬಂದಾಗಿನಿಂದ 8 ರಾಜ್ಯಗಳಿಗೆ ನಡೆದ ಚುನಾವಣೆಗಳಲ್ಲಿ ಎಲ್ಲೂ ನಿಚ್ಚಳ ಬಹುಮತ ಪಡೆಯುವುದರಲ್ಲಿ ವಿಫಲಗೊಂಡಿದೆ. (ಇತ್ತೀಚೆಗೆ ನಡೆದ ದೆಹಲಿಯ ಚುನಾವಣೆಗಳೊಂದೇ ಅಪವಾದ). ಈ ರಾಜ್ಯಗಳು ಹರಿಯಾಣ, ಹಿಮಾಚಲ ಪ್ರದೇಶ, ಪ.ಬಂಗಾಳ, ನಾಗಾಲ್ಯಾಂಡ್, ಕೇರಳ, ತ್ರಿಪುರ, ಕರ್ನಾಟಕ, ಆಂಧ್ರಪ್ರದೇಶ. ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ಕಾಂಗ್ರೆಸ್ (ಐ) ಪಕ್ಷ ಬಹುಮತವನ್ನು ಚುನಾವಣೆಗಳ ನಂತರ "ತಯಾರಿಸಿದರೆ" ಕೇರಳದಲ್ಲಿ ಆಳುವ ರಂಗದಲ್ಲಿ ಅದು ಒಂದು ಘಟಕ ಮಾತ್ರ. ಜೂನ್ 80 ರಿಂದೀಚೆಗೆ ಚುನಾವಣೆ ನಡೆದ ಒಟ್ಟು 1150 ಕ್ಷೇತ್ರಗಳಲ್ಲಿ ಕೇವಲ 312 ಕ್ಷೇತ್ರಗಳಲ್ಲಿ ಕಾಂಗ್ರೆಸ್ (ಐ) ಗೆದ್ದಿದೆ. ಇವನ್ನು ಗಮನಿಸಿದರೆ ಕರ್ನಾಟಕ, ಆಂಧ್ರ ಚುನಾವಣಾ ಪರಿಣಾಮಗಳು ಶ್ರೀಮತಿ ಗಾಂಧಿಯವರ ಇಳಿಯುತ್ತಿರುವ ಜನಪ್ರಿಯತೆಯ, ಅವರ ಧೋರಣೆಗಳಿಗೆ ಹೆಚ್ಚುತ್ತಿರುವ ವಿರೋಧದ ಮುಂದಿನ ಹಂತ ಅಷ್ಟೆ.

ಕರ್ನಾಟಕ ಚುನಾವಣೆಯ ಪರಿಣಾಮಗಳನ್ನು ವೀಕ್ಷಿಸಿದರೆ ಎದ್ದು ಕಾಣುವ ಅಂಶ ಭಾವನಾತ್ಮಕ ಪ್ರತಿಕ್ರಿಯೆಯ ಅಥವಾ ಯಾವುದೇ ಥರದ ವ್ಯಕ್ತಿಯ ವರ್ಚಸ್ಸಿನ, 'ಗಾಳಿ'ಯ ಅಭಾವ ಮತ್ತು ಪಕ್ಷ ರಾಜಕೀಯ ನಿರ್ಧಾರ. ಇನ್ನೊಂದು ಮುಖ್ಯ ಅಂಶ ಮುಖ್ಯಮಂತ್ರಿಯ ಸೋಲು. ಇದು ಬಹುಶಃ ಭಾರತದ ರಾಜಕೀಯ ಚರಿತ್ರೆಯಲ್ಲಿಯೇ ಅಪರೂಪದ ಅಂಶ.

ಕಾಂಗ್ರೆಸ್ ಪಕ್ಷದ (ಅದರ ಎಲ್ಲಾ ಅವತಾರಗಳಲ್ಲಿ) ಶೇಕಡಾವಾರು ಮತ ಗಳಿಕೆ ಚುನಾವಣೆಯಿಂದ ಚುನಾವಣೆಗೆ ಕಡಿಮೆಯಾಗುತ್ತಾ ಬಂದಿರುವುದು ಯಾರಿಗೂ ತಿಳಿಯದ ವಿಷಯವೇನಲ್ಲ. 1972ರ ಚುನಾವಣೆಯಲ್ಲಿ 165ಸ್ಥಾನಗಳನ್ನು ಗೆದ್ದ ಅದು 1978 ರಲ್ಲಿ 149ಕ್ಕಿಳಿದರೆ (ಪಕ್ಷಾಂತರಗಳ ನಂತರ 184), 1983 ರಲ್ಲಿ 81 ಸ್ಥಾನಗಳಿಗಿಳಿದಿದೆ. 1978 ಮತ್ತು 1983ರಲ್ಲಿ ವಿವಿಧ ಪಕ್ಷಗಳ ಶೇಕಡಾವಾರು ಮತ ಗಳಿಕೆ, ಸ್ಥಾನಗಳನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಪಕ್ಷ	1978 ಶೇಕಡಾವಾರು ಮತ ಗಳಿಕೆ	1978 ಗೆದ್ದ ಸ್ಥಾನಗಳು	1983 ಶೇಕಡಾವಾರು ಮತ ಗಳಿಕೆ	1983 ಗೆದ್ದ ಸ್ಥಾನಗಳು
ಕಾಂಗ್ರೆಸ್(ಐ)	44.25	150	40.49	81
ಜನತಾ	37.95	59	33.66	95
ಬಿ.ಜೆ.ಪಿ.	—	—	8.00	18
ಕಾಂಗ್ರೆಸ್ (ರೆಡ್ಡಿ)	7.99	2	—	—
ಸಿ. ಪಿ. ಐ.	1.19	3	1.26	3
ಸಿ. ಪಿ. ಐ(ಎಂ)	0.50	—	0.90	3
ಎಂ. ಇ. ಎಸ್. ಮತ್ತು ಪಕ್ಷೇತರರು	8.12	10	15.69	22

ಇದರಿಂದ ವ್ಯಕ್ತಪಡುವ ಅಂಶವೆಂದರೆ ಕೇವಲ ಶೇಕಡಾ 3.76 ಮತಗಳಿಂದ ಕಾಂಗ್ರೆಸ್ ಸುಮಾರು ಅರ್ಧದಷ್ಟು ಸ್ಥಾನಗಳನ್ನು ಕಳೆದುಕೊಂಡದ್ದಲ್ಲದೆ ಅಧಿಕಾರವನ್ನು ಕಳೆದುಕೊಂಡಿದೆ. ಇದಲ್ಲದೆ ಕಾಂಗ್ರೆಸ್ (ರೆಡ್ಡಿ) ಆಳುವ ಕಾಂಗ್ರೆಸ್ ವಿರುದ್ಧ ಮತಗಳನ್ನು ಒಡೆಯದೆ ಹೋಗಿದ್ದರೆ 1978ರಲ್ಲೇ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುವ ಸಾಧ್ಯತೆ ಇತ್ತು. 1983ರ ಚುನಾವಣೆಯಲ್ಲಿ ಚುನಾವಣೆ ಹೊಂದಾಣಿಕೆ ಮಾಡಿಕೊಂಡ ವಿರೋಧ ಪಕ್ಷಗಳ ರಂಗ ಮತ್ತು ಬಿ. ಜೆ. ಪಿ. ಸೇರಿ 43.82 ಶೇಕಡಾ ಮತ ಗಳಿಸಿವೆ. ಹಾಗೂ 121 ಸ್ಥಾನ ಗಳಿಸಿವೆ. 1978 ಮತ್ತು 1983ರ ಚುನಾವಣೆಗಳಲ್ಲಿ ಶೇಕಡಾವಾರು ಮತ ಏರಿಕೆ/ಇಳಿಕೆಯನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಕಾಂಗ್ರೆಸ್ (ಐ)	— 3.76
ಜನತಾ	— 4.29
ಸಿ. ಪಿ. ಐ.	+ 0.07
ಸಿ. ಪಿ. ಎಂ.	+ 0.40
ಪಕ್ಷೇತರರು	+ 7.57

ಇಲ್ಲಿ ಕಾಂಗ್ರೆಸ್ (ಐ) ನಂತೆ ಜನತಾ ಸಹ ಶೇಕಡಾವಾರು ಮತಗಳಿಕೆಯಲ್ಲಿ ಹಿಂದೆ ಬಿದ್ದಿದೆ. ಇದಕ್ಕೆ ಮುಖ್ಯ ಕಾರಣ ಜನತಾಪಕ್ಷ ಈ ಮಧ್ಯೆ ವಿಭಜನೆಗೊಂಡು ಬಿ. ಜೆ. ಪಿ. ಪಕ್ಷ ಹುಟ್ಟಿಕೊಂಡಿರುವುದು. ಪಕ್ಷೇತರರು ಮತ್ತು ಇತರ ಪಕ್ಷಗಳ ಶೇಕಡಾವಾರು ಮತ ಮತ್ತು ಸ್ಥಾನಗಳ ಸಂಖ್ಯೆ ಸುಮಾರಾಗಿ ದ್ವಿಗುಣಗೊಂಡಿದೆ.

1980ರ ಲೋಕಸಭಾ ಚುನಾವಣೆಗಳನ್ನು ತೆಗೆದುಕೊಳ್ಳುವುದಾದರೆ ಕಾಂಗ್ರೆಸ್‌ನ ಶೇಕಡಾವಾರು ಮತ 56.25 ಶೇಕಡಾದಿಂದ ಸುಮಾರು 15.76 ಶೇಕಡಾದಷ್ಟು ಇಳಿದಿದೆ. ವಿರೋಧಪಕ್ಷಗಳೆಲ್ಲಾ ಸೇರಿ ಶೇಕಡಾ 41.21 ರಿಂದ 43.82ಕ್ಕೆ ಏರಿದೆ. 1978ರಲ್ಲಿ ಜನತಾಪಕ್ಷ ಸುಮಾರು 50 ಸ್ಥಾನಗಳಲ್ಲಿ ಸ್ವಲ್ಪದರಲ್ಲಿ ಕಳೆದುಕೊಂಡದ್ದು, ಇದಕ್ಕೆ ಮುಖ್ಯವಾಗಿ ಕಾಂಗ್ರೆಸ್ (ರೆಡ್ಡಿ) ವಿರೋಧ ಪಕ್ಷದ ಮತಗಳನ್ನು ವಿಭಜಿಸಿದ್ದೇ ಕಾರಣ. 1980 ರ ಚುನಾವಣೆಗಳಲ್ಲಿ ಕಾಂಗ್ರೆಸ್ (ಅರಸು) ಇದೇ ಕೆಲಸ ಮಾಡಿ ಇನ್ನೂ ದೊಡ್ಡ ಪ್ರಮಾಣದಲ್ಲಿ ವಿರೋಧ ಪಕ್ಷಗಳ ಪರಾಭವಕ್ಕೆ ಕಾರಣವಾಯಿತು. ಇದೇ ಪಾತ್ರವನ್ನು 1983ರ ಚುನಾವಣೆಗಳಲ್ಲಿ ಬಿ. ಜೆ. ಪಿ. ವಹಿಸಿದ್ದರೂ (ವಿರೋಧಿ ರಂಗದಿಂದ ಪ್ರತ್ಯೇಕವಾಗಿ ಸ್ಪರ್ಧಿಸುವ ಮೂಲಕ) ಅದರ ಪ್ರಭಾವ ಕೆಲವು ಭೌಗೋಳಿಕ ಕ್ಷೇತ್ರಗಳಿಗೆ ಮೀಸಲಾಗಿದ್ದರಿಂದ ಕಾಂಗ್ರೆಸ್ ಪುನಃ ಇಂತಹ ವಿಭಜನೆಯ ಲಾಭ ಪಡೆಯುವುದು ತಪ್ಪಿತು.

ಹೀಗೆ ಮೇಲಿನ ವಿಶ್ಲೇಷಣೆಯಿಂದ ತಿಳಿದು ಬರುವುದೇನೆಂದರೆ ಕಾಂಗ್ರೆಸ್‌ನ ಜನಪ್ರಿಯತೆ ಇಳಿಮುಖವಾಗಿದ್ದು ಮತ್ತು ವಿರೋಧ ಪಕ್ಷದ ಮತಗಳು ಗಣನೀಯ ಪ್ರಮಾಣದಲ್ಲಿ ವಿಭಜಿತವಾಗದಿದ್ದುದು ಕಾಂಗ್ರೆಸ್ ಪಕ್ಷದ 35 ವರ್ಷಗಳ ಆಳ್ವಿಕೆಯನ್ನು ಕೊನೆಗೊಳಿಸಲು ಸಾಧ್ಯವಾಯಿತು.

ವಿರೋಧ ಪಕ್ಷ ಚುನಾವಣೆ ಗೆದ್ದಲ್ಲೆಲ್ಲಾ ಸಾಕಷ್ಟು ಅಂತರದಿಂದ ಗೆದ್ದಿದ್ದಾರೆನ್ನುವುದೂ ಗಮನಾರ್ಹ. ಇದಲ್ಲದೆ, ರಾಜಕೀಯ ಪ್ರಜ್ಞೆ ಇರುವ ಬೆಂಗಳೂರು, ಮೈಸೂರಿನಂತಹ ನಗರಗಳಲ್ಲದೆ, ರಾಜಕೀಯ ಪ್ರಜ್ಞೆ ಪ್ರಬಲವಾಗಿರುವ ಜಿಲ್ಲೆಗಳಲ್ಲಿ ವಿರೋಧಿರಂಗ ಭಾರಿ ವಿಜಯ ಸಾಧಿಸಿರುವುದು ಜನತೆಯ ಪಕ್ಷ ರಾಜಕೀಯ ನಿರ್ಧಾರ ಇದು ಎಂಬುದನ್ನು ಸ್ಪಷ್ಟಪಡಿಸುತ್ತದೆ! ಅಲ್ಲದೆ ಮುಖ್ಯಮಂತ್ರಿ ಸೇರಿದಂತೆ ಸುಮಾರು 12 ಮಂತ್ರಿಗಳ ಸೋಲು ಸಹ ಈ ಅಂಶದತ್ತ ಬೊಟ್ಟು ಮಾಡುತ್ತದೆ. ಜನತೆ ಕಾಂಗ್ರೆಸ್‌ನ ರಾಜಕೀಯದಿಂದ, ತಮ್ಮ ಪ್ರತಿನಿಧಿಗಳ ವರ್ತನೆಯಿಂದ ರೋಷಗೊಂಡಿದ್ದು ಮತ್ತೊಮ್ಮೆ ಸ್ಪರ್ಧಿಸಿದ್ದ 131 ಮಾಜೀ ಶಾಸಕರಲ್ಲಿ 73 ಜನರು ಸೋತಿದ್ದಾರೆ ಮತ್ತು 101 ಕಾಂಗ್ರೆಸ್ ಸ್ಪರ್ಧಿಗಳಲ್ಲಿ 65 ಜನ ಸೋತಿದ್ದಾರೆ ಎಂಬೀ ಅಂಶಗಳಿಂದ ವ್ಯಕ್ತವಾಗುತ್ತದೆ. ಅಲ್ಲದೆ ವಿಧಾನಸಭೆ ವಿಸರ್ಜನೆಯಾಗುವಾಗ ಕಾಂಗ್ರೆಸ್-ಐ ಹೊಂದಿದ್ದ 184 ಸ್ಥಾನಗಳಲ್ಲಿ 106 ರಷ್ಟು ಸ್ಥಾನಗಳನ್ನು ಕಳೆದುಕೊಂಡಿದೆ.

1980 ರಲ್ಲಿ 28 ಲೋಕಸಭಾ ಸ್ಥಾನಗಳಲ್ಲಿ 27ನ್ನು ಗೆದ್ದಿದ್ದ ಕಾಂಗ್ರೆಸ್-ಐ ಕೇವಲ 5 ಜಿಲ್ಲೆಗಳಲ್ಲಿ ತನ್ನ ಪ್ರಾಬಲ್ಯ ಉಳಿಸಿಕೊಳ್ಳಲು ಸಮರ್ಥವಾಗಿದೆ – ರಾಯಚೂರು, ಬೀದರ, ಕೊಡಗು, ಬಿಜಾಪುರ, ಬಳ್ಳಾರಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಅದರ ಪ್ರಾಬಲ್ಯ ಸಂಪೂರ್ಣವಾಗಿ ಮುರಿದುಬಿದ್ದಿದೆ, ಇಲ್ಲವೇ ಸ್ವಲ್ಪವಾದರೂ ಕುಗ್ಗಿದೆ. ಮೈಸೂರು, ತುಮಕೂರು, ದಕ್ಷಿಣ ಕನ್ನಡ, ಬೆಂಗಳೂರು ಜಿಲ್ಲೆಗಳಲ್ಲಿ ಕಾಂಗ್ರೆಸ್ ಭಾರಿ ಪರಾಭವ ಅನುಭವಿಸಿದೆ. ಮಂಡ್ಯ, ಬಿಜಾಪುರ ಜಿಲ್ಲೆಗಳಲ್ಲಿ ಜನತಾಪಕ್ಷದ ಪ್ರಭಾವ ಕುಗ್ಗಿದೆ. ಹೈದ್ರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ ಸೇರಿದ ಉತ್ತರ ಕರ್ನಾಟಕ ಪ್ರದೇಶದಲ್ಲಿ ಹೆಚ್ಚುಕಡಿಮೆ ಯಥಾ ಮುಂದುವರಿದಿದ್ದು. ಕಾಂಗ್ರೆಸ್-ಐ ವಿರೋಧಪಕ್ಷಗಳಿಗಿಂತ ಜಾಸ್ತಿ ಸ್ಥಾನಗಳನ್ನು ಪಡೆದಿದೆ. ಹಳೆಯ ಮೈಸೂರು ಪ್ರದೇಶದಲ್ಲಿ ಜನತಾರಂಗ ಭಾರಿ ವಿಜಯ ಸಾಧಿಸಿದೆ. (109 ಸ್ಥಾನಗಳಲ್ಲಿ 70 ಸ್ಥಾನಗಳು) ಜನತಾರಂಗದ 2/3 ರಷ್ಟು ಸ್ಥಾನಗಳು ಈ ಪ್ರದೇಶದಿಂದಲೇ ಬಂದಿವೆಯೆಂಬುದು ಗಮನಾರ್ಹ. ಯಾವ ಜಿಲ್ಲೆಯಲ್ಲೂ ಕಾಂಗ್ರೆಸ್-ಐ 9 ಸ್ಥಾನಗಳಿಗಿಂತ ಜಾಸ್ತಿ ಸ್ಥಾನ ಪಡೆದಿಲ್ಲ. ಬೆಂಗಳೂರು ನಗರ ಜಿಲ್ಲೆಯಲ್ಲಿ ಒಂದೇ ಒಂದು ಸ್ಥಾನವನ್ನು ಪಡೆಯದೆ ಹೋಗಿದೆ. ಇಂದಿರಾಗಾಂಧಿಯವರ ಕ್ಷೇತ್ರವಾಗಿದ್ದ ಚಿಕ್ಕಮಗಳೂರಿನ 7 ಸ್ಥಾನಗಳಲ್ಲಿ ಕೇವಲ 1 ಸ್ಥಾನ ಮಾತ್ರ ಉಳಿಸಿಕೊಳ್ಳಲು ಸಮರ್ಥವಾಗಿದೆ.

ಪ್ರದೇಶವಾರು ಜನತಾರಂಗ, ಕಾಂಗ್ರೆಸ್-ಐ ಮತ್ತು ಇತರರ ಶೇಕಡಾವಾರು ಮತಗಳಿಕೆ, ಸ್ಥಾನಗಳು ಇತ್ಯಾದಿ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

		ಕಾಂಗ್ರೆಸ್-ಐ		ವಿರೋಧಿರಂಗ ಮತ್ತು ಬಿ.ಜೆ.ಪಿ		ಇತರರು	
ಪ್ರದೇಶ	ಒಟ್ಟು ಸ್ಥಾನಗಳು	ಶೇಕಡಾವಾರು ಮತ	ಸ್ಥಾನ	ಶೇಕಡಾವಾರು ಮತ	ಸ್ಥಾನ	ಶೇಕಡಾವಾರು ಮತ	ಸ್ಥಾನ
ಹಳೇ ಮೈಸೂರು	109	38.28	28	46.29	70	16.32	11
ಹೈದ್ರಾಬಾದ್ ಕರ್ನಾಟಕ	39	45.83	22	37.26	15	20.47	2
ಮುಂಬೈ ಕರ್ನಾಟಕ	57	42.37	26	37.55	21	20.08	10
ಇತರ ಜಿಲ್ಲೆಗಳು (ದ.ಕನ್ನಡ ಕೊಡಗು)	18	41.36	5	52.27	13	6.37	—

ಹಳೇ ಮೈಸೂರು : ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ ಮೈಸೂರು, ಹಾಸನ, ಚಿಕ್ಕಮಗಳೂರು ಶಿವಮೊಗ್ಗ, ಬೆಂಗಳೂರು.

ಹೈದ್ರಾಬಾದ್ ಕರ್ನಾಟಕ : ಬೀದರ, ಗುಲ್ಬರ್ಗ, ರಾಯಚೂರು, ಬಳ್ಳಾರಿ.

ಮುಂಬೈ ಕರ್ನಾಟಕ : ಧಾರವಾಡ, ಬಿಜಾಪುರ, ಬೆಳಗಾಂ, ಉತ್ತರ ಕನ್ನಡ.

ಈ ಚುನಾವಣೆಗಳ ಇನ್ನೊಂದು ಗಮನಾರ್ಹ ಅಂಶ ಎಡಪಕ್ಷಗಳ ಬಲ 3 ರಿಂದ 6 ಕ್ಕೇರಿರುವುದು ಸಿ.ಪಿ.ಐ. ತನ್ನ ಬಲ ಕಾಯ್ದುಕೊಂಡಿದ್ದರೆ ಸಿ.ಪಿ.ಎಂ. 3 ಸ್ಥಾನಗಳನ್ನು ಪ್ರಥಮ ಬಾರಿ ಗೆಲ್ಲಲು ಸಾಧ್ಯವಾಗಿದೆ. ಸಿ. ಪಿ. ಎಂ. ಸ್ಪರ್ಧಿಸಿದ್ದ ಇನ್ನೆರಡು ಸ್ಥಾನಗಳಲ್ಲೂ ಕೇವಲ ಅಲ್ಪ ಮತಗಳ ಅಂತರದಿಂದ ಸೋತದ್ದು ಸೇರಿಸಿದರೆ ಸಿ. ಪಿ. ಎಂ.ನ ಪ್ರಗತಿ ಗಮನಾರ್ಹವಾದುದು. ಅಲ್ಲದೆ ಎರಡೂ ಪಕ್ಷಗಳು ಶೇಕಡಾವಾರು ಮತ ಗಳಿಕೆ ಏರಿಸಿಕೊಂಡಿವೆ ವಿರೋಧಿರಂಗ ರಚಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿ ವಿರೋಧಿ ಮತಗಳು ವಿಭಜಿತವಾಗದಂತೆ ತಡೆಯುವುದರಲ್ಲಿ ಎಡಪಕ್ಷಗಳು ಗಮನಾರ್ಹ ರಾಜಕೀಯ ಪ್ರಭಾವ ಬೀರಿವೆ.

ಬಿ. ಜೆ. ಪಿ. ತನ್ನ ಸ್ಥಾನಗಳನ್ನು 4 ರಿಂದ 18 ಕ್ಕೇರಿಸಿದ್ದರೂ ಅದು ಸ್ಪರ್ಧಿಸಿದ 110 ಸ್ಥಾನಕ್ಕೆ ಹೋಲಿಸಿದರೆ ಬಹು ಕಡಿಮೆಯೇ. ಅದು ಸ್ಪರ್ಧಿಸಿದ ಸ್ಥಾನಗಳಲ್ಲಿ 63 ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿದೆ. ಅದರಲ್ಲಿ ಸುಮಾರು 42 ಕ್ಷೇತ್ರಗಳಲ್ಲಿ ಶೇಕಡಾ 5 ಮತಗಳನ್ನೂ ಗಳಿಸಿಲ್ಲ. ಕೇವಲ 12 ಕ್ಷೇತ್ರಗಳಲ್ಲಿ ಅದು ಎರಡನೆಯ ಪಕ್ಷವಾಗಿ ಹೊಮ್ಮಿದೆ. ಜನತಾರಂಗದೊಂದಿಗೆ ಸ್ಥಾನ ಹೊಂದಾಣಿಕೆಯಲ್ಲಿ ನೀಡಲಾಗಿದ್ದ 45 ಕ್ಷೇತ್ರಗಳು ಅದರ ಬಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲೇ ಇತ್ತು. ಎಂದು ಇದರಿಂದ ಸಿದ್ಧವಾಗುತ್ತದೆ. ಬಿ.ಜೆ.ಪಿ. ಎರಡನೆಯ ಪಕ್ಷವಾಗಿ ಹೊಮ್ಮಿದ 12 ಕ್ಷೇತ್ರಗಳಲ್ಲಿ ಅರ್ಧದಷ್ಟು ಕ್ಷೇತ್ರಗಳಲ್ಲಿ ಜನತಾ ರಂಗ ಗೆದ್ದಿದೆ.

(7ನೇ ಪುಟ ನೋಡಿ)

ಮಾರ್ಕ್ಸ್ ಮರಣ ಶತಾಬ್ದಿ ಲೇಖನ ಮಾಲೆ

ಲೇಖನ–3

ಕಾರ್ಲ್‌ಮಾರ್ಕ್ಸ್ ಮತ್ತು

ಕಾರ್ಲ್ ಮಾರ್ಕ್ಸ್ ಮರಣ ಶತಾಬ್ದಿ ಲೇಖನ ಮಾಲೆಯ ಮೂರನೆಯ ಲೇಖನವಾಗಿ ಕಾ. ಇ. ಎಂ. ಎಸ್: ನಂಬೂದ್ರಿಪಾದ್ ಅವರು ಬರೆದ ಈ ಲೇಖನ ಪ್ರಕಟವಾಗುತ್ತಿದೆ. ಹಿಂದಿನ ಸಂಚಿಕೆಯಲ್ಲಿ ಭಾರತದ ಬಗ್ಗೆ ಕಾರ್ಲ್ ಮಾರ್ಕ್ಸ್‌ರವರು ಬರೆದ ಲೇಖನಗಳನ್ನು ಪ್ರಕಟಿಸಿದ್ದೆವು. ಆ ಲೇಖನಗಳಿಗೆ ಪೂರಕವಾಗಿ ಪ್ರಸ್ತುತ ಸಂಚಿಕೆಯಲ್ಲಿ ಇ. ಎಂ. ಎಸ್. ರವರ ಲೇಖನ ಪ್ರಕಟವಾಗುತ್ತಿದೆ.

ಮಾರ್ಚ್ 14 ರಂದು ಕಾರ್ಲ್ ಮಾರ್ಕ್ಸ್‌ರವರ ಮರಣ ಶತಾಬ್ಧಿಯ ಅಂಗವಾಗಿ 'ಐಕ್ಯರಂಗ' ವಿಶೇಷ ಸಂಚಿಕೆಯನ್ನು ಪ್ರಕಟಿಸಲಿರುವುದರಿಂದ ಮಾರ್ಚ್ 6ರ ಸಂಚಿಕೆ ಪ್ರಕಟವಾಗುವುದಿಲ್ಲ. ಆದರೆ ಮಾರ್ಚ್ 20ನೇ ತಾರೀಖಿನ ಸಂಚಿಕೆಯಿಂದ ಲೇಖನ ಮಾಲೆಯನ್ನು ಮುಂದುವರಿಸಲಾಗುತ್ತದೆ.

— **ಸಂಪಾದಕ**

ಕಾರ್ಲ್‌ಮಾರ್ಕ್ಸ್‌ರ ಮರಣ ಶತಾಬ್ದಿಯನ್ನು 1983 ರಲ್ಲಿ ಪ್ರಪಂಚದಾದ್ಯಂತ ಮಾರ್ಕ್ಸ್‌ವಾದಿಗಳು ಆಚರಿಸುತ್ತಿದ್ದಾರೆ. ಮಾರ್ಕ್ಸ್‌ವಾದದ ಉಗಮ ಮತ್ತು ಮಾರ್ಕ್ಸ್‌ನ ನಿಧನದ ನಂತರದ ಬೆಳವಣಿಗೆಯ ಕುರಿತು ತೀವ್ರ ಅಧ್ಯಯನ ನಡೆಸಲೂ ಅವರು ಮಗ್ನರಾಗಿದ್ದಾರೆ.

ಭಾರತದ ಮಾರ್ಕ್ಸ್‌ವಾದಿಗಳಿಗೆ ಈ ವರ್ಷ ಹೆಚ್ಚು ಮಹತ್ವದ್ದಾಗಿದೆ. ಕಾರ್ಲ್‌ಮಾರ್ಕ್ಸ್ ಭಾರತದ ಬಗ್ಗೆ ಲೇಖನ ಬರೆದು ಇಂದಿಗೆ 130 ವರ್ಷಗಳು ಕಳೆದಿವೆ. ಜೂನ್ 10, 1853 ರಂದು **'ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ'** ಎಂಬ ಲೇಖನವನ್ನು ಬರೆದರು. ಇದು ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್ ಪತ್ರಿಕೆಯಲ್ಲಿ ಪ್ರಕಟವಾಯಿತು. **ಈಸ್ಟ್ ಇಂಡಿಯಾ ಕಂಪನಿ — ಅದರ ಇತಿಹಾಸ ಮತ್ತು ಫಲಿತಾಂಶ** ಎಂಬ ಲೇಖನವನ್ನು ಜೂನ್ 24 ರಂದು ಬರೆದರು **ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಮುಂದಿನ ಪರಿಣಾಮಗಳು** ಎಂಬ ಮೂರನೆಯ ಲೇಖನ ಆಗಸ್ಟ್ 8 ರಂದು ಪ್ರಕಟವಾಯಿತು.

ಈ ಮೂರು ಲೇಖನಗಳು, ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಸಮಯದಲ್ಲಿ ಬರೆದವು. ಆಗಿನ ಕಂಪನಿಯ ಆಳ್ವಿಕೆ ಕೊನೆಗೊಳಿಸಿ ನೇರ ಬ್ರಿಟಿಷ್ (ರಾಣಿಯ) ಆಳ್ವಿಕೆ ಆರಂಭಿಸುವ ಸಮಯವದು. ಸಾಮಾಜಿಕ–ಆರ್ಥಿಕ–ರಾಜಕೀಯ ಹಿನ್ನೆಲೆಗಳು ಹೇಗೆ ಬಿಕ್ಕಟ್ಟಿಗೆ ಕಾರಣವಾದವು ಎನ್ನುವುದನ್ನು ತನ್ನ ಲೇಖನದಲ್ಲಿ ಮಾರ್ಕ್ಸ್ ವಿವರಿಸಿದ. ಈ ಲೇಖನಗಳು ಸಣ್ಣದಾದ ಪತ್ರಿಕಾ ವಿಮರ್ಶೆಯ ರೂಪದಲ್ಲಿದ್ದರೂ, 'ಭಾರತದ ಸಮಸ್ಯೆ'ಯ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಬಲ್ಲವಾಗಿದ್ದವು. ತನ್ನ ಪಾಂಡಿತ್ಯಪೂರಿತ ಅಧ್ಯಯನದ ಮೂಲಕ ಮುಂಬರುವುದನ್ನು ಅವರು ಸೂಚಿಸಿದ್ದರು.

ಭಾರತದ ಬಗೆಗಿನ ಮಾರ್ಕ್ಸ್‌ನ ಅಧ್ಯಯನ ಈ ಮೂರು ಲೇಖನಗಳೊಂದಿಗೇ ಮುಗಿಯಲಿಲ್ಲ. ಪ್ರಪಂಚದಾದ್ಯಂತ ನಡೆಯುತ್ತಿದ್ದ ಕ್ರಾಂತಿಶೀಲ ಚಳುವಳಿಗಳನ್ನು ಅವರು ಗಮನಿಸುತ್ತಿದ್ದರು ಮತ್ತು ವಿಶ್ಲೇಷಿಸುತ್ತಿದ್ದರು. ಅಂತೆಯೇ ಭಾರತದಲ್ಲಿ 1857 ರಲ್ಲಿ ಸೈನ್ಯದೊಳಗೆ ನಡೆದ ಕ್ರಾಂತಿಯ ಬಗ್ಗೆಯೂ 1857ರ ಜೂನ್ 30 ರಂದು ಲೇಖನವೊಂದನ್ನು ಬರೆದರು. **'ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಪ್ರಥಮ ಹೋರಾಟ'**ದ ಕುರಿತು ಮಾರ್ಕ್ಸ್ ಮತ್ತು ಎಂಗಲ್ಸ್ ಇಬ್ಬರೂ ಲೇಖನಗಳ ಸರಣಿಯನ್ನೆ ಪ್ರಕಟಿಸಿದ್ದರು.

ಇದರೊಂದಿಗೆ, 1870 ರಲ್ಲಿ **'ಭಾರತದ ಇತಿಹಾಸದ ಬಗೆಗಿನ ಟಿಪ್ಪಣಿಗಳು'** ಎಂಬ ಲೇಖನವನ್ನು ಮಾರ್ಕ್ಸ್ ಮತ್ತು ಎಂಗಲ್ಸ್‌ರು ಸಿದ್ಧಪಡಿಸಿದರು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದೃಷ್ಟಿಕೋನದಿಂದ ಭಾರತದ ಕ್ರಾಂತಿಕಾರೀ, ಪ್ರಜಾಪ್ರಭುತ್ವವಾದಿ ಮತ್ತು ಶ್ರಮಜೀವಿ ವರ್ಗದ ಚಳುವಳಿಗಳನ್ನು ಅಭ್ಯಸಿಸಲು ಈ ಲೇಖನಗಳು ಬಹಳ ಉಪಯುಕ್ತವಾಗಿವೆ. ಆದ್ದರಿಂದ ಈ ಶತಮಾನದ ವರ್ಷದಂದು ಭಾರತದ ಮಾರ್ಕ್ಸ್‌ವಾದಿಗಳು ಈ ಲೇಖನಗಳನ್ನು ಅಭ್ಯಾಸ ಮಾಡುವರೆಂದು ಆಶಿಸಲಾಗಿದೆ.

ಈ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ನೆನಪಿನಲ್ಲಿಡಬೇಕು. ಬ್ರಿಟಿಷ್ ಆಳ್ವಿಕೆಯ ಬಗ್ಗೆ ಮತ್ತು ಅದರ ವಿರುದ್ಧ ಜನತೆಯ ಪ್ರತಿಭಟನೆಯ ಕುರಿತು ಮಾರ್ಕ್ಸ್ ಬರೆಯುವಾಗ ಈ ಚಳುವಳಿ ಇನ್ನೂ ತನ್ನ ಮೊದಲ ಹಂತಗಳಲ್ಲಿತ್ತು. ಮಾರ್ಕ್ಸ್‌ನ ನಿಧನದ ನಂತರ, ಬ್ರಿಟಿಷ್ ಆಳ್ವಿಕೆಯಲ್ಲಿನ ಬಿಕ್ಕಟ್ಟು ಹಾಗೂ ಜನತೆಯ ಪ್ರತಿರೋಧ ಶೀಘ್ರಗತಿಯಲ್ಲಿ ಬೆಳೆಯಿತು.

ಜನತೆಯ ಪ್ರತಿರೋಧದ ನಂತರದ ಬೆಳವಣಿಗೆಯ ವಿವಿಧ ಹಂತಗಳನ್ನು, ಬ್ರಿಟಿಷ್ ಆಳ್ವಿಕೆಯ ಬಿಕ್ಕಟ್ಟಿನ ಉಲ್ಬಣತೆಯನ್ನು, ಅಂತಿಮವಾಗಿ ಬ್ರಿಟಿಷರು ಭಾರತ ಬಿಟ್ಟು ತೊಲಗಿದ ಕುರಿತು, ಭಾರತದ ಇಬ್ಭಾಗದ ಬಗ್ಗೆ ಮುಂದೆ, ಹಳೆಯ ನೀತಿ ಧೋರಣೆಯನ್ನೆ ಅನುಸರಿಸಿದ್ದರ ಫಲವಾಗಿ ಬಿಕ್ಕಟ್ಟು ಉಂಟಾದದ್ದು ಮತ್ತು ಕಾರ್ಮಿಕ ವರ್ಗದ ಉದಯದ ಬಗೆಗಿನ ಪ್ರಶ್ನೆಗಳ ಕುರಿತ ಚರ್ಚೆಯನ್ನು ಕಾದಿರಿಸೋಣ.

ಮಾರ್ಕ್ಸ್ ತನ್ನ ಲೇಖನ ಬರೆಯುವಾಗ ಭಾರತದಲ್ಲಿ ಬೂರ್ಜ್ವಾಗಳಾಗಲೀ ಶ್ರಮಿಕ ವರ್ಗವಾಗಲೀ ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಭಾರತವನ್ನು ತನ್ನ ವಶಪಡಿಸಿಕೊಂಡಿದ್ದ ಬ್ರಿಟಿಷ್ ಬೂರ್ಜ್ವಾಗಳು, ಬಂಡವಾಳಶಾಹಿ ಪೂರ್ವದ ಸಮಾಜ ವ್ಯವಸ್ಥೆಗೆ ಕೊಡಲಿಯೇಟು ಹಾಕತೊಡಗಿದ್ದನ್ನು ಮಾರ್ಕ್ಸ್ ಗುರುತಿಸಿದ್ದ. ಈ ಬ್ರಿಟಿಷ್ ಬೂರ್ಜ್ವಾಗಳು ತಮ್ಮ **ವಿನಾಶಕಾರೀ** ಕಾರ್ಯದೊಂದಿಗೇ ರಚನಾತ್ಮಕವಾಗಿಯೂ ಕೆಲಸ ಮಾಡುತ್ತಿತ್ತು:– (ಅ) ಭಾರತದ ರಾಜಕೀಯ ಐಕ್ಯತೆಯನ್ನು ಬಲಪಡಿಸುವುದು ಮತ್ತು ವಿಸ್ತರಿಸುವುದು. (ಆ) ಹಿಂದೂ, ಮುಸ್ಲಿಂ, ಸಿಖ್ ಮತ್ತು ಮೇಲ್ಜಾತಿ, ಕೀಳು ಜಾತಿಗಳನ್ನು ಒಳಗೊಂಡ ಸೇನೆಯನ್ನು ರಚಿಸುವುದು. (ಇ) ಸ್ವತಂತ್ರ ಪತ್ರಿಕಾ ವ್ಯವಸ್ಥೆ (ಈ) ಭೂಮಿ ಸಂಬಂಧದಲ್ಲಿ ಖಾಸಗಿ ಒಡೆತನವನ್ನು ಜಮೀನ್ದಾರೀ ಮತ್ತು ರೈತವಾರೀ ರೂಪದಲ್ಲಿ ನಿರ್ಮಿಸಿದ್ದು (ಉ) ಉಗಿಯಂತ್ರ, ಟೆಲಿಗ್ರಾಫ್ ಮುಂತಾದ ನವೀನ ಉಪಕರಣಗಳನ್ನು ಪರಿಚಯಿಸಿದ್ದು (ಊ) ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರೀ ಬದಲಾವಣೆಗಳನ್ನು ತರುವ ಶಕ್ತಿಯುಳ್ಳ ರೈಲ್ವೇಯನ್ನು ಆರಂಭಿಸಿದ್ದು.

ಇಂತಹ ಕಾರ್ಯಗಳಿಂದ ಭಾರತವನ್ನು ಆಧುನೀಕರಿಸಬಹುದೆಂಬ ಭ್ರಮೆ ಮಾರ್ಕ್ಸ್‌ಗೆ ಇದ್ದಿಲ್ಲ. ಮಾರ್ಕ್ಸ್ ಬರೆಯುತ್ತಾರೆ–"ಬ್ರಿಟಿಷರು ಭಾರತಕ್ಕೆ ರೈಲ್ವೇಯ ಸೌಲಭ್ಯ ಒದಗಿಸಿದ್ದಾದರೆ ಅದು, ಕಡಿಮೆ ವೆಚ್ಚದಲ್ಲಿ ಹತ್ತಿ ಮುಂತಾದ ಕಚ್ಚಾ ವಸ್ತುಗಳನ್ನು ಪಡೆಯುವುದಕ್ಕೆ ಮಾತ್ರವೆಂದು ನನಗೆ ತಿಳಿದಿದೆ. ಆದರೆ ಒಂದು ದೇಶದ ಪ್ರಗತಿ ಪಥಕ್ಕೆ ಬೇಕಾದ ಸಾಧನಗಳನ್ನು ಒಮ್ಮೆ ಒದಗಿಸಿದರೆ ಮುಂದೆ ಅದು ಹರಡುತ್ತಾ ತನ್ನ ಎಲ್ಲೆಯನ್ನು ವಿಸ್ತರಿಸುವದನ್ನು ತಡೆಗಟ್ಟಲು ಆಗುವುದಿಲ್ಲ. ರೈಲು ವ್ಯವಸ್ಥೆಯನ್ನು ಕಾಯ್ದುಕೊಂಡು ಬರಬೇಕಾದರೆ ಉದ್ಯಮಗಳ ಬೆಳವಣಿಗೆ ಅನಿವಾರ್ಯವಾಗಿದೆ. ರೈಲ್ವೆಗೆ ನೇರವಾಗಿ ಸಂಬಂಧಿಸಿರದ ಎಲ್ಲಾ ಉದ್ಯಮಗಳಲ್ಲೂ ಯಂತ್ರಗಳ ಬಳಕೆಯೂ ಬೆಳೆಯುತ್ತದೆ. ಆದ್ದರಿಂದ ಭಾರತದಲ್ಲಿ ಹೊಸ ಕೈಗಾರಿಕೆಗಳ ಬೆಳವಣಿಗೆಗೆ ರೈಲ್ವೆ ಕಾರಣೀಭೂತವಾಗುತ್ತದೆ." ಹೀಗಾಗಿ, ಯುರೋಪಿನಲ್ಲಿ ಆದಂತೆ ಭಾರತದಲ್ಲಿ ಕೂಡಾ ಬಂಡವಾಳಶಾಹಿ ಸಮಾಜದಲ್ಲಿರುವ ಎರಡು ವರ್ಗಗಳು – ಬೂರ್ಜ್ವಾಗಳು ಮತ್ತು ಶ್ರಮಿಕವರ್ಗ —ಉದಯವಾಗುವುದೆಂದು ಕಾರ್ಲ್ ಮಾರ್ಕ್ಸ್ ಧೃಡೀಕರಿಸಿದ್ದರು. ಕಾರ್ಲ್ ಮಾರ್ಕ್ಸ್‌ರು ಬರೆದುದು ನಂತರದ 130 ವರ್ಷಗಳಲ್ಲಿ ಇದು ವಾಸ್ತವವಾಗಿ ನಡೆಯುತ್ತಾ ಬಂದಿದೆ.

ಮಾರ್ಕ್ಸ್‌ರ ಬರಹದ 55 ವರ್ಷಗಳ ನಂತರ ಆತನ ಮೇಧಾವಿ ಅನುಯಾಯಿ ಲೆನಿನ್ ಭಾರತದ ಬಗ್ಗೆ ವಿಶ್ಲೇಷಿಸಿದ್ದಾನೆ. ಭಾರತದಲ್ಲಿ ಯುವ ಕಾರ್ಮಿಕ ವರ್ಗ ಉದಯವಾಗಿದ್ದಲ್ಲದೆ ಅದು ರಾಜಕೀಯವಾಗಿಯೂ, ಲೋಕಮಾನ್ಯ ತಿಲಕರ ಬಂಧನದ ಬಗ್ಗೆ ಪ್ರತಿಕ್ರಿಯಿಸಿದ್ದನ್ನು ಲೆನಿನ್ ವಿವರಿಸಿದ. ಅಂದಿನಿಂದ, ಬಂಡವಾಳಶಾಹಿ ಸಮಾಜದ ಎರಡು ಪ್ರತಿಸ್ಪರ್ಧಿ ವರ್ಗಗಳು ಭಾರತದಲ್ಲಿ ಬೆಳೆಯುತ್ತಲೇ ಬಂದಿವೆ. ಈ ವರ್ಗಗಳ ನಡುವೆ ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಿಸಿದ ಹೋರಾಟ ಮಾತ್ರವಲ್ಲ, ಭಾರತ ಸ್ವಾತಂತ್ರ್ಯ ಸಂಗ್ರಾಮದ ರಾಜಕೀಯ ಚಳುವಳಿಯಲ್ಲಿ ತನ್ನ ವರ್ಗದ ನೇತೃತ್ವಕ್ಕಾಗಿಯೂ ಹೋರಾಟ ನಡೆಯುತ್ತಲೇ ಇತ್ತು – ಮುಂಬಯಿಯ ಕಾರ್ಮಿಕರ ರಾಜಕೀಯ ಹೋರಾಟದ ಮಹತ್ವದ ಬಗ್ಗೆ ಲೆನಿನ್ ವಿವರಿಸಿದ ನಂತರದ ಏಳು ದಶಕಗಳಲ್ಲಿ ಈ ಎರಡು ವರ್ಗಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ನೇತೃತ್ವಕ್ಕಾಗಿ ಸ್ಪರ್ಧಿಸಿ ಹೋರಾಡಿದವು.

ರಾಜಕೀಯ ನೇತೃತ್ವಕ್ಕಾಗಿ ನಡೆದ ಹೋರಾಟದಲ್ಲೇನೊ ಬೂರ್ಜ್ವಾಗಳಿಗೇ ವಿಜಯವುಂಟಾಯಿತು. ಬ್ರಿಟಿಷರು ಭಾರತ ಬಿಟ್ಟಾಗ ಅಧಿಕಾರ ಬೂರ್ಜ್ವಾಗಳಿಗೆ ದೊರಕಿತು. ಆದರೆ ಕಾರ್ಮಿಕ ವರ್ಗ ಕಡೆಗಣಿಸುವ ಮಟ್ಟಕ್ಕೆ ಬರಲಿಲ್ಲ. ಬದಲಾಗಿ ತನ್ನ ಸಂಖ್ಯೆಯಲ್ಲಿ ಮತ್ತು ರಾಜಕೀಯ ಶಕ್ತಿಯಲ್ಲಿ ಹೆಚ್ಚಿನ ಪ್ರಗತಿ ಹೊಂದಿತು. ಈ ಎರಡು ವರ್ಗಗಳು ಇಂದು ಪರಸ್ಪರ ವಿರುದ್ಧ ಹಿತಾಸಕ್ತಿಯುಳ್ಳ ಎರಡು ತಂಡಗಳಾಗಿ ಮಾರ್ಪಟ್ಟಿದೆ. ಪ್ರಜಾಪ್ರಭುತ್ವವನ್ನು ದುರುಪಯೋಗಮಾಡುವ, ದೇಶದ ಹಿತವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆಯಿಡುವ ಮತ್ತು ಶ್ರಮಜೀವಿಗಳ ಮೇಲೆ ಧಾಳಿ ಮಾಡುವ ಬೂರ್ಜ್ವಾಗಳು ಮತ್ತದರ ಸಹಚರರ ಗುಂಪು ಒಂದು. ಇನ್ನೊಂದು ತಂಡ ಪ್ರಜಾಪ್ರಭುತ್ವ ರಕ್ಷಣೆಗೆ ಬದ್ಧವಾಗಿದ್ದು, ಸಾಮ್ರಾಜ್ಯಶಾಹಿಗಳ, ಬಹುರಾಷ್ಟ್ರೀಯ ಕಂಪನಿಯ ಧಾಳಿಯನ್ನು ಎದುರಿಸುತ್ತಾ, ಗ್ರಾಮೀಣ ಹಾಗೂ ನಗರ ಕೆಲಸಗಾರರ ಹಿತವನ್ನು ರಕ್ಷಿಸುತ್ತಾ ಬಂದಿದೆ.

ಭಾರತದಬಗ್ಗೆ ಮಾರ್ಕ್ಸ್ ಬರೆಯುತ್ತಿದ್ದಾಗ(1853–1858) ಶ್ರಮಿಕ ವರ್ಗ ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಆದರೆ, ಏಷ್ಯಾದ ಇತರ ದೇಶಗಳಲ್ಲಿದ್ದಂತೆ ಗ್ರಾಮೀಣ ಬಡವರು ವಿದೇಶೀ ಶೋಷಣೆಗೊಳಗಾಗಿ ದಿವಾಳಿಯಾಗುತ್ತಿದ್ದುದನ್ನು ಅವನು ಗಮನಿಸಿದ್ದ. ವಿದೇಶೀ ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳ ಆಕ್ರಮಣದಿಂದ ಗ್ರಾಮೀಣ ಶ್ರೀಮಂತರೂ ದಿವಾಳಿಯಾಗತೊಡಗಿದ್ದರು. ಇದರಿಂದ ಬ್ರಿಟಿಷ್ ಪೂರ್ವದ ಆಳುವ ಮನೆತನಗಳು ಕೂಡ ಪ್ರತಿಭಟಿಸತೊಡಗಿದ್ದರು. ಹೀಗಾಗಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ವ್ಯಾಪಕವಾದ ಐಕ್ಯ ಹೋರಾಟ ಸಾಧ್ಯವಾಯಿತು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಈ ಮಹತ್ವದ ಬಗ್ಗೆ ಚಾರಿತ್ರಿಕ ಭೌತಿಕವಾದದ ಸ್ಥಾಪಕರು ವಿವರವಾದ ಅಧ್ಯಯನ ವಿಶ್ಲೇಷಣೆ ನಡೆಸಿದ್ದರು.

1857–58ರ ಸಮಯದಲ್ಲಿ ಭಾರತದಲ್ಲಿನ ಬಂಡಾಯದ ಬಗ್ಗೆ ಮಾರ್ಕ್ಸ್ ಬರೆದ ಎಲ್ಲಾ ಲೇಖನಗಳ ಬಗ್ಗೆ ವಿವರವಾಗಿ ಚರ್ಚಿಸುವುದು ಇಲ್ಲಿನ ಉದ್ದೇಶವಲ್ಲ. 1857ರ ಜೂನ್ 30 ಮತ್ತು ಜುಲೈ 17ರಂದು ಮಾರ್ಕ್ಸ್‌ರು ಬರೆದ ಎರಡು ಲೇಖನಗಳ ಬಗ್ಗೆ ಸೀಮಿತಗೊಳ್ಳೋಣ. ಇವು ಭಾರತೀಯ ಬಂಡಾಯದ ಬಗ್ಗೆ ಸಮಾಧಾನಕರ ಹಾಗೂ ಸರಿಯಾದ ಚಿತ್ರಣವನ್ನು ನೀಡುತ್ತವೆ.

ಇದರಲ್ಲಿ ಮೊದಲನೆಯ ಲೇಖನ ಭಾರತದ ಸೈನ್ಯ ರಚಿಸುವ ಬ್ರಿಟಿಷರ ಕ್ರಿಯೆಯಲ್ಲಿನ ವೈರುಧ್ಯದಕುರಿತಾಗಿದೆ. ಒಂದು ಕಡೆ "ಭಾರತೀಯ ಜನತೆ ಬ್ರಿಟಿಷರಿಗೆ ಅಧೀನರಾಗಿರುವುದು ಈ ದೇಶಿಯ ಸೈನ್ಯದ ನಿಷ್ಠೆಯ ಮೇಲೆ ಅವಲಂಬಿಸಿರುತ್ತದೆ ಎಂಬುದು ಮೊದಲ ನೋಟಕ್ಕೇ ಸ್ಪಷ್ಟವಾಗಿದೆ" ಈ ಸೈನ್ಯವನ್ನು ನಿರ್ಮಿಸಿದ ಬ್ರಿಟಿಷ್ ಆಡಳಿತವು ಅದೇ ಹೊತ್ತಿನಲ್ಲಿ ಭಾರತೀಯ ಪ್ರತಿಭಟನೆಯ ಮೊದಲ ಸಾರ್ವತ್ರಿಕ ಕೇಂದ್ರವನ್ನೂ ಸಂಘಟಿಸಿತು. ಇಂತ ಕೇಂದ್ರವನ್ನು ಭಾರತೀಯ ಜನರು ಹಿಂದೆಂದೂ ಹೊಂದಿರಲಿಲ್ಲ." ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ತನಗೆ ಪ್ರತಿರೋಧಿಯಾದ ವ್ಯವಸ್ಥಿತ ಶಕ್ತಿಯೊಂದನ್ನು ಸೃಷ್ಟಿಸದೆ ಇದ್ದರೆ ಬ್ರಿಟಿಷ್ ಆಡಳಿತಕ್ಕೆ ತನ್ನ ಆಳ್ವಿಕೆಯನ್ನು ಬಲಪಡಿಸುವುದಾಗಲೀ ರಕ್ಷಿಸುವುದಾಗಲೀ ಸಾಧ್ಯವಾಗುತ್ತಿರಲಿಲ್ಲ. ಬ್ರಿಟಿಷ್ ಹಿತವನ್ನು ರಕ್ಷಿಸುವ ಸಲುವಾಗಿ ಸಂಘಟಿಸಿದ ಶಸ್ತ್ರಸಜ್ಜಿತ ಭಾರತೀಯ ಜನರೇ ಬ್ರಿಟಿಷ್ ವಿರೋಧದ ಕೇಂದ್ರವಾದರು.

ಮುಂದುವರಿಯುತ್ತಾ ಮಾರ್ಕ್ಸ್ ಹೀಗೆ ಹೇಳುತ್ತಾರೆ—"ದೇಶೀಯ ಸೈನ್ಯವು ಎಷ್ಟರಮಟ್ಟಿಗೆ ಅವಲಂಬನೀಯ ಎಂಬುದು ಈಚಿನ ದಂಗೆಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಪರ್ಷಿಯಾದ ಜತೆಗೆ ನಡೆದ ಯುದ್ಧದಿಂದಾಗಿ ಬಂಗಾಳ ಪ್ರಾಂತದಲ್ಲಿದ್ದ ಯುರೋಪಿಯನ್ ಸೈನಿಕರ ಸಂಖ್ಯೆ ಅತಿ ಕಮಿಯಾದಾಗ ಈ ದಂಗೆಗಳು ಪ್ರಾರಂಭವಾದವು. ಇದಕ್ಕೆ ಮುನ್ನವೂ ಭಾರತೀಯ ಸೈನ್ಯದಲ್ಲಿ ದಂಗೆಗಳು ನಡೆದಿದ್ದವು. ಆದರೆ ಈಗಿನ ಬಂಡಾಯವು

ಭಾರತೀಯ ಕ್ರಾಂತಿಕಾರಿಗಳು

ಇ. ಎಂ. ಎಸ್. ನಂಬೂದಿರಿಪಾಡ್

ಕೆಲವು ವಿಶಿಷ್ಟ ಘಾತುಕ ಲಕ್ಷಣಗಳನ್ನು ಹೊಂದಿದೆ. ಇದೇ ಮೊದಲಬಾರಿಗೆ ಸಿಪಾಯಿದಳಗಳು ತಮ್ಮ ಯುರೋಪಿಯನ್ ಅಧಿಕಾರಿಗಳನ್ನು ಕೊಲೆ ಮಾಡಿದ್ದಾರೆ. ಮುಸಲ್ಮಾನರೂ, ಹಿಂದೂಗಳೂ ತಮ್ಮ ಪರಸ್ಪರ ವೈರವನ್ನು ಬಿಟ್ಟು ತಮ್ಮ ಸಾಮಾನ್ಯ ಪ್ರಭುಗಳ ವಿರುದ್ಧ ಜತೆಗೂಡಿದ್ದಾರೆ. ಹಿಂದೂಗಳು ಆರಂಭಿಸಿದ ದಂಗೆಯು ವಾಸ್ತವವಾಗಿ ದೆಹಲಿಯ ಸಿಂಹಾಸನದ ಮೇಲೆ ಮಹಮದೀಯ ಚಕ್ರವರ್ತಿಯನ್ನು ಕೂರಿಸುವುದರಲ್ಲಿ ಕೊನೆಗಂಡಿದೆ. ಕೊನೆಯದಾಗಿ ದಂಗೆಯು ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತಗೊಂಡಿಲ್ಲ. ಕೊನೆಯದಾಗಿ ಏಷ್ಯದ ಮಹಾದೇಶಗಳು ಇಂಗ್ಲೀಷ್ ಪರಮಾಧಿಕಾರದ ವಿರುದ್ಧ ಸಾರ್ವತ್ರಿಕ ಅತೃಪ್ತಿ ತೋರುತ್ತಿರುವ ಕಾಲದಲ್ಲೇ ಆದ ಈ ಸೈನ್ಯ ಬಂಡಾಯ ನಿಸ್ಸಂದೇಹವಾಗಿಯೂ ಪರ್ಷಿಯನ್ ಹಾಗೂ ಚೀಣಿ ಯುದ್ಧಗಳೊಂದಿಗೂ ಸಂಬಂಧ ಹೊಂದಿದೆ."

ಬಂಡಾಯವನ್ನು ಬ್ರಿಟಿಷರು ಮಟ್ಟಹಾಕುತ್ತಾರೆ ಮತ್ತು ಸುಸಜ್ಜಿತ ಬ್ರಿಟಿಷ್ ಸೈನ್ಯದ ವಿರುದ್ಧ ದೇಶೀಯ ಬಂಡಾಯಕಾರರು ಹೆಚ್ಚು ಕಾಲ ತಡೆಯಲಾರರು ಎಂಬುದು ಮಾರ್ಕ್ಸ್‌ಗೆ ಚೆನ್ನಾಗಿ ಗೊತ್ತಿತ್ತು. "ಶಿಸ್ತಿನ ದಾರಿಯಿಂದ ಬೇರ್ಪಟ್ಟು ತನ್ನ ಆಫೀಸರರನ್ನು ಕೊಲೆಗೈದಿರುವ ಈ ಸೈನಿಕರು ತಮಗಾಗಿ ಉನ್ನತಾಧಿಕಾರಿಯೊಬ್ಬನನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಹೀಗಾಗಿ ಗಂಭೀರವಾದ ಮತ್ತು ದೀರ್ಘವಾದ ಪ್ರತಿಭಟನೆಯನ್ನು ಸಂಘಟಿಸಲು ಅಸಮರ್ಥವಾಗಿದೆ. ಈಗಾಗಲೇ ದೆಹಲಿಯಲ್ಲಿ ಸೇರಿರುವ ಸೈನಿಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಬಂಗಾಳ ಪ್ರಾಂತದ ಬಂಡಾಯಗಾರರೂ ಸೇರಿ ಅನಿಶ್ಚಿತತೆ ಮತ್ತು ಗೊಂದಲ ಹೆಚ್ಚುತ್ತಿದೆ."

ದೆಹಲಿಯು ಬಹಳಕಾಲ ಬಂಡಾಯಗಾರರ ಅಧೀನದಲ್ಲಿ ಇರುವುದು ಸಾಧ್ಯವಿಲ್ಲವೆಂಬುದನ್ನು ಮಾರ್ಕ್ಸ್ ದೃಢಪಡಿಸಿದ್ದ. ದೆಹಲಿ ನಗರವನ್ನು ವಶಪಡಿಸಿಕೊಳ್ಳಲು ಬ್ರಿಟಿಷ್ ಸೈನ್ಯ ಯಾಕೆ ತಡಮಾಡುತ್ತಿದೆ ಎಂದು ಮಾರ್ಕ್ಸ್ ತನ್ನ ಅಚ್ಚರಿ ವ್ಯಕ್ತಪಡಿಸಿದ್ದ. "ದೆಹಲಿಯ ಪತನದ ಸುದ್ಧಿಯನ್ನು ನಾವು ದಿನವೂ ನಿರೀಕ್ಷಿಸಬಹುದು" ಎಂದು ಮಾರ್ಕ್ಸ್ ಹೇಳಿದ್ದರು.

ಮಾರ್ಕ್ಸ್‌ನ ದೃಷ್ಟಿಯಲ್ಲಿ "ಮುಂದೇನು" ಎಂಬುದು ಮುಖ್ಯ ಪ್ರಶ್ನೆಯಾಗಿತ್ತು. "ಭಾರತೀಯ ಆಳ್ವಿಕೆಯ ಪರಂಪರಾಗತ ಕೇಂದ್ರವು ಬಂಡಾಯಗಾರ ಸಿಪಾಯಿಗಳ ಅಧೀನದಲ್ಲಿರುವುದರಿಂದ, ಕಲ್ಕತ್ತಾದಿಂದ ಪಂಜಾಬ್‌ವರೆಗೆ ಬಂಡಾಯ ಹರಡಿದೆ ಮತ್ತು ಬ್ರಿಟಿಷ್ ಅಧಿಕಾರದ ಬುನಾದಿಯನ್ನು ದೇಶದಲ್ಲೆಡೆ ಅಲುಗಾಡಿಸಲಾಗಿದೆ. ಹೀಗಾಗಿ ದೆಹಲಿಯ ಪತನದೊಂದಿಗೆ ಸಿಪಾಯಿಗಳ ನಡುವೆ ಗಾಬರಿ ಹುಟ್ಟಿ ಬಂಡಾಯದ ಗತಿಯನ್ನು ತಡೆಗಟ್ಟುತ್ತದೆ ಅಥವಾ ಬ್ರಿಟಿಷ್ ಆಳ್ವಿಕೆಯನ್ನು ಪುನರ್‌ಸ್ಥಾಪಿಸುತ್ತದೆ ಎಂದು ನಾವು ಭಾವಿಸಿದರೆ ಇದಕ್ಕಿಂತ ದೊಡ್ಡ ತಪ್ಪು ಬೇರಿಲ್ಲ" ಎಂದು ಮಾರ್ಕ್ಸ್ ಹೇಳುತ್ತಾರೆ.

ಆದ್ದರಿಂದ ಬಂಡಾಯಗಾರರ ಕೈಯಿಂದ ದೆಹಲಿಯನ್ನು ಬ್ರಿಟಿಷರು ತಮ್ಮ ವಶಪಡಿಸಿಕೊಂಡರೆ ಬಿಕ್ಕಟ್ಟು ಕೊನೆಗೊಳ್ಳುವುದಿಲ್ಲವಾಗುತ್ತದೆ. ಯಾಕೆಂದರೆ ದೇಶದಾದ್ಯಂತ ಭಾರತೀಯ ಸೈನ್ಯ ಉದ್ರೇಕಿತ ಸ್ಥಿತಿಯಲ್ಲಿತ್ತು. "ದೇಶೀಯ ಸೈನ್ಯವನ್ನು ಯಾವ ರೀತಿಯಲ್ಲಿ ಬಳಸುತ್ತಾರೆಂಬುದನ್ನು ಗಮನದಲ್ಲಿರಿಸಿ ಆ ಆಧಾರದ ಮೇಲೆ ಬ್ರಿಟಿಷ್ ಅಧಿಕಾರಕ್ಕೆ ವಿಧೇಯರಾಗಿರುವುದಾಗಿ ಅನೇಕ ಸೇನಾ ತುಕಡಿಗಳು ಬಹಿರಂಗವಾಗಿ ಘೋಷಿಸಿವೆ. ಬಂಡಾಯಗಾರರ ವಿರುದ್ಧವಾಗಿ ಬ್ರಿಟಿಷರಿಗೆ ತಾವು ಸಹಕರಿಸುವುದಿಲ್ಲವೆಂದೂ ಬದಲಾಗಿ ತಮ್ಮ 'ಸಹೋದರ'ರನ್ನು ಬೆಂಬಲಿಸುವುದಾಗಿ" ಈ ತುಕಡಿಗಳು ಹೇಳಿವೆ. "ಕಲ್ಕತ್ತಾದಿಂದ ಪ್ರತಿಯೊಂದು ಕೇಂದ್ರಗಳಲ್ಲೂ ಈ ಸತ್ಯ ದೃಷ್ಟಾಂತವಾಗಿದೆ. ದೇಶೀಯ ತುಕಡಿಗಳು ಸ್ವಲ್ಪ ಕಾಲ ತಟಸ್ಥವಾಗಿದ್ದು, ತಾವು ಬಲಗೊಂಡಿದ್ದೇವೆಂದು ತಿಳಿದ ಕೂಡಲೇ ಬಂಡಾಯವೆದ್ದರು."

ಲಂಡನ್ ಟೈಮ್ಸ್‌ನ ಭಾರತೀಯ ವರದಿಗಾರನ ಲೇಖನದಿಂದ ಕೆಳಗಿನ ಪ್ಯಾರವನ್ನು ಮಾರ್ಕ್ಸ್ ಉಲ್ಲೇಖಿಸುತ್ತಾರೆ :

"ಎಲ್ಲವೂ ಶಾಂತವಾಗಿದೆ ಎಂದು ನೀವು ಓದಿದರೆ, ಅದರರ್ಥ ದೇಶೀಯ ಸೇನಾ ತುಕಡಿಗಳು ಬಹಿರಂಗವಾಗಿ ಬಂಡಾಯವೆದ್ದಿಲ್ಲ, ಅವಿನ್ನೂ ಬಲಹೀನವಾಗಿವೆ ಅಥವಾ ಆ ರೀತಿ ಭ್ರಮಿಸಿವೆ. ಅಥವಾ ಇನ್ನೂ ಸರಿಯಾದ ಕಾಲಕ್ಕಾಗಿ ಅವು ಕಾಯುತ್ತಿವೆ. ಬಂಗಾಳ ಪ್ರಾಂತ್ಯದ ತುಕಡಿಗಳಲ್ಲಿ ನಿಷ್ಠೆಯನ್ನು ಎತ್ತಿಹಿಡಿದಿರುವುದನ್ನು ಓದಿದಿರಾದರೆ ಅದನ್ನು ಈ ರೀತಿ ಅರ್ಥೈಸಿಕೊಳ್ಳಬೇಕು :–ಕೇವಲ ಅರ್ಧದಷ್ಟು ತುಕಡಿಗಳು ಮಾತ್ರ ನಿಷ್ಠೆಯಿಂದಿದ್ದು ಉಳಿದ ಅರ್ಧ ಯುರೋಪಿಯನ್ನರು ಎಚ್ಚರತಪ್ಪುವುದನ್ನೇ ಕಾಯುತ್ತಿದ್ದಾರೆ ಅಥವಾ ಸಂಶಯವನ್ನು ದೂರ ಮಾಡುತ್ತಾ ಬಂಡಾಯಗಾರ ಸಹಚರರಿಗೆ ಸಹಕರಿಸುತ್ತಿದ್ದಾರೆ".

ಬ್ರಿಟಿಷರು ಭಾರತೀಯ ಸೈನ್ಯದಲ್ಲಿನ ಬಂಡಾಯವನ್ನು ಬರಿಯ "ದಂಗೆ" ಎಂದು ವರ್ಣಿಸಲು ಪ್ರಯತ್ನಿಸಿದರ ವಿರುದ್ಧವಾಗಿ ಇದು ಭಾರತದ ಜನತೆಯ ಮಧ್ಯದಲ್ಲಿನ ಸಿಟ್ಟು, ಅಸಮಾಧಾನ ಇವುಗಳು ಹೆಚ್ಚುತ್ತಿರುವುದನ್ನು ಎತ್ತಿ ತೋರಿಸುತ್ತದೆ ಎಂದು ಮಾರ್ಕ್ಸ್ ತಿಳಿದಿದ್ದ. ಬಂಡಾಯಗಾರ ಸಿಪಾಯಿಗಳು ಭಾರತೀಯ ಜನತೆಯ ಅಸಮಾಧಾನ, ಕೋಪದ ಪ್ರತಿನಿಧಿಗಳಾಗಿದ್ದರು.

ಸಿಪಾಯಿಗಳಲ್ಲಿ ಅಸಮಾಧಾನದ ಒಂದಿದ್ದ ಧಾರ್ಮಿಕ ಮತ್ತು ಜಾತೀಯ ಹಿನ್ನೆಲೆಯನ್ನು ಮಾರ್ಕ್ಸ್ ಗಮನಿಸಿದ್ದ. "ಸರಕಾರವು ತಮ್ಮ ಮತಧರ್ಮದ ಅನುಷ್ಠಾನದಲ್ಲಿ ಕೈಹಾಕಬಹುದೆಂಬ ಅಂಜಿಕೆ ದೇಶೀಯರಲ್ಲಿತ್ತು. ಸೈನಿಕರಿಗೆ ನೀಡಲಾದ ತೋಟಾಗಳ ಮೇಲೆ ಸುತ್ತಿದ ಕಾಗದಕ್ಕೆ ದನದ ಹಾಗೂ ಹಂದಿಯ ಕೊಬ್ಬನ್ನು ಸವರಲಾಗಿತ್ತು. ಈ ಕಾಗದವನ್ನು ಕಚ್ಚಿ ತೆಗೆಯಬೇಕಾದ್ದರಿಂದ ಅದು ತಮ್ಮ ಧಾರ್ಮಿಕ ವಿಧಿಗಳ ಉಲ್ಲಂಘನೆಯಾಗಿದ್ದಿತೆಂದು ದೇಶೀಯರು ಭಾವಿಸಿದ್ದುದು ಸ್ಥಳೀಯ ಗೊಂದಲಗಳಿಗೆ ಪ್ರೇರಕವಾಗಿದ್ದಿತು"

1857ರ ಬಂಡಾಯವೇನೋ ಮಾರ್ಕ್ಸ್ ನುಡಿದಂತೆಯೇ ಹತ್ತಿಕ್ಕಲ್ಪಟ್ಟಿತು. ಆದರೆ "ಹಳೆಯ ಪ್ರಪಂಚವನ್ನು ಕಳಕೊಂಡು ಹೊಸತರ ಲಾಭವಿಲ್ಲದ" ರೀತಿಯ ಭಾರತೀಯ ಜನರ ಭಾವನೆ ಮಾತ್ರ ಹತ್ತಿಕ್ಕಲಾಗಲಿಲ್ಲ. ಇನ್ನೊಂದೆಡೆ ಈ ಅಸಮಾಧಾನ ಬೆಳೆಯುತ್ತಾ ಸ್ವಾತಂತ್ರ್ಯ ಚಳುವಳಿಯು ಬೇರೆ ಬೇರೆ ಹಂತಗಳಲ್ಲಿ ವಿವಿಧ ರೂಪಗಳನ್ನು ತಾಳಿತು. ಈ ಪ್ರಮುಖ ಬೆಳವಣಿಗೆಗಳ ಕುರಿತ ವಿಶ್ಲೇಷಣೆಗಳ ಬದಲಾಗಿ ನಾವು 1857ರ ಬಂಡಾಯದ ನಂತರ ಸರಿಯಾಗಿ 90 ವರ್ಷಗಳಲ್ಲಿ ಬ್ರಿಟಿಷರು "ಭಾರತವನ್ನು ಬಿಟ್ಟು ತೊಲಗಿದ" ಕುರಿತು ನೋಡೋಣ.

1857 ಮೇ, ಜೂನ್‌ನಲ್ಲಿದ್ದಂತೆಯೇ 1946 ಮತ್ತು 47ರ ಮೊದಲಲ್ಲಿ ಭಾರತೀಯ ಜನತೆ ಬಂಡಾಯವೆದ್ದಿದ್ದರು. ಇನ್ನೂ ಹೆಚ್ಚಾಗಿ 1857ರಲ್ಲಿ "ಭಾರತೀಯ ಬಂಡಾಯ ಪರ್ಷಿಯನ್ ಮತ್ತು ಚೀನೀ ಯುದ್ಧಗಳೊಂದಿಗೆ ಹೊಂದಿದ ಸಂಬಂಧದಂತೆಯೇ" 1946–47ರ ಸಾಮೂಹಿಕ ಚಳುವಳಿ ಕೂಡ ಕೊರಿಯ, ಪೂರ್ವಯೂರೋಪ್. ಚೈನ ಮುಂತಾದೆಡೆಗಳಲ್ಲಿನ ಕ್ರಾಂತಿಕಾರಿ ಚಳುವಳಿಯೊಂದಿಗೆ ಹತ್ತಿರದ ಸಂಬಂಧ ಹೊಂದಿತು,

90 ವರ್ಷಗಳ ಹಿಂದೆ ಭಾರತದಲ್ಲಿ ಸಹ ಜನತೆಯ ಸಮರಶೀಲತೆಯ ಅಲೆ ಇನ್ನೊಂದು ಬಂಡಾಯದಲ್ಲಿ ಪ್ರತಿಫಲಿಸಿತು. ಅದು 1947ನೇ ಫೆಬ್ರುವರಿಯ ಭಾರತೀಯ ನೌಕಾಪಡೆಯ ಬಂಡಾಯಗಾರರಿಗೆ ಮುಂಬಯಿಯ ಸಮರಶೀಲ ಕಾರ್ಮಿಕ ವರ್ಗ ಮತ್ತು ಕ್ರಾಂತಿಕಾರಿ ಶಕ್ತಿಗಳು ಬೆಂಬಲ ಸೂಚಿಸಿ ಮುಂದೆ ಬಂದವು.

"ಸೂರ್ಯ ಮುಳುಗದ" ಬ್ರಿಟೀಷ್ ಚಕ್ರಾಧಿಪತ್ಯದ ನಾಯಕರು ತಮ್ಮ ಆಟ ಮುಗಿಯಿತು ಎಂದು ತಿಳಿದುಕೊಂಡರು. ಆದರೆ ಈ ನಾಯಕರು ಇನ್ನೊಂದು ವಿಷಯವನ್ನೂ ತಿಳಿದರು. ಅದೇನೆಂದರೆ ಸೈನ್ಯ ಸಜ್ಜಿತ ಶಕ್ತಿಯನ್ನು ಮುಂದಿಟ್ಟುಕೊಂಡು ಸಾಮ್ರಾಜ್ಯಶಾಹಿಯನ್ನು ಪೂರ್ತಿ ಹೊಡೆದೋಡಿಸಿ ಭಾರತೀಯ ಜನತೆಯನ್ನು ವಿಮೋಚಿಸುವ ಆಸಕ್ತಿಯುಳ್ಳ ಸಮರಶೀಲ ಜನತೆ ಒಂದೆಡೆಯಿದ್ದರೆ, ಸ್ವಾತಂತ್ರ್ಯ ಚಳುವಳಿಯ ನಾಯಕರು-ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಂಧಾನಕ್ಕೆ ಸಿದ್ಧರಾಗಿದ್ದರು. ಸಾಮ್ರಾಜ್ಯಶಾಹಿಯ ಹಿಡಿತವನ್ನು ಎಷ್ಟರ ಮಟ್ಟಿಗಾದರೂ ಉಳಿಸಿಕೊಳ್ಳಬೇಕಾದರೆ ಈ ಎರಡು ಸಂಸ್ಥೆಗಳೊಂದಿಗೆ (ಕಾಂಗ್ರೆಸ್ – ಮುಸ್ಲಿಂ ಲೀಗ್) ಸಂಧಾನ ಮಾಡಿಕೊಳ್ಳುವುದಾಗಿತ್ತು. ಇದರಿಂದ ಹೊಸತಾಗಿ ಸಂಘಟಿತವಾದ ಎರಡು ರಾಷ್ಟ್ರಗಳ ನಡುವೆ ಸದಾ ತಿಕ್ಕಾಟದ ಪರಿಸ್ಥಿತಿ ಉಂಟಾಗಿ ಸಾಮ್ರಾಜ್ಯಶಾಹಿಯು ತನ್ನ ಬೇಳೆ ಬೇಯಿಸಿಕೊಳ್ಳಲು ಅನುಕೂಲವಾಗುವ ಸಾಧ್ಯತೆಗಳಿದ್ದವು. ಭಾರತದಲ್ಲಿ ಶ್ರಮ ಜೀವಿಗಳು—ಕೈಗಾರಿಕಾ ಮತ್ತು ಗ್ರಾಮೀಣ ಕಾರ್ಮಿಕರು, ಭಾರತೀಯ ರೈತಾಪಿ ಜನತೆ, ಸಣ್ಣಪುಟ್ಟ ಆಸ್ತಿ ಒಡೆಯರು ಇತ್ಯಾದಿ— 1857 ರಿಂದಲೂ ತ್ಯಾಗ ಬಲಿದಾನ ಮಾಡುತ್ತಾ ಬಂದಿದ್ದರೂ ಸ್ವಾತಂತ್ರ್ಯದ ಫಲವನ್ನು ಉಣ್ಣುವುದರಿಂದ ವಂಚಿತರಾದರು. ಆದರೂ ಸಹ ಈ ಹೋರಾಟ ಶೀಲ ಜನ ಒಂದು ಶಕ್ತಿಯಾಗಿ ಬೆಳೆದರು. ಅವರು ತಮ್ಮದೇ ಆದ ಹೋರಾಟದ ಸಂಘಟನೆಗಳನ್ನು–ಕಾರ್ಮಿಕ ಸಂಘಟನೆಗಳು, ಕಿಸಾನ್ ಸಭೆ, ಕೃಷಿ ಕಾರ್ಮಿಕರ ಸಂಘ, ಮಹಿಳೆಯರ, ವಿದ್ಯಾರ್ಥಿ–ಯುವಜನರ ಸಂಘಟನೆಗಳು–ಕಟ್ಟಿಕೊಂಡರು. ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಒಂದುಗೂಡಲ್ಪಟ್ಟರು. ಈ ಸಂಘಟನೆಗಳ ಮುಂಚೂಣಿಯಲ್ಲಿ ರಾಜಕೀಯ ಪಕ್ಷಗಳಿದ್ದವು. ಈ ಪಕ್ಷಗಳಲ್ಲಿ, ಪ್ರಪಂಚದಾದ್ಯಂತ ಕ್ರಾಂತಿಕಾರೀ ಚಳುವಳಿಗಳಿಂದ ಪಾಠಕಲಿತ, ಮಾರ್ಕ್ಸ್–ಲೆನಿನ್‌ವಾದೀ ತತ್ವದ ಆಧಾರದ ಮೇಲೆ ನಿಂತ ಪಕ್ಷಗಳೂ ಸೇರಿವೆ.

ಸ್ವಾತಂತ್ರ್ಯದ ಗಳಿಕೆಯ ನಂತರ ದೇಶಕ್ಕೆ ಬಂಡವಾಳಶಾಹಿ ಪ್ರಜಾಪ್ರತ್ವದ ಸಂವಿಧಾನವನ್ನು ಅಳವಡಿಸಲಾಯ್ತು. ಇದರಿಂದ ಎರಡು ರೀತಿಯ ಪರಸ್ಪರ ಎದುರು ಬದುರಾಗಿರುವ ರಾಜಕೀಯ ಸಂಯೋಜನೆ ಉಂಟಾಯಿತು. ಭಾರತದ ಹೊಸ ಆಳುವ ಪಕ್ಷವಾದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಬಂಡವಾಳಶಾಹಿ ಆಧುನೀಕರಣದ ಮೂಲಕ ಪ್ರಗತಿಯ ದಾರಿ ಬಯಸಿತು. ಈ ಆಳುವ ಪಕ್ಷದಿಂದ ಕೆಲವು ವಿಷಯಗಳಲ್ಲಿ ಮಾತ್ರ ಬೇರೆಯಾದ ಇತರ ಕೆಲವು ಪಕ್ಷಗಳು ಪ್ರಗತಿಪಥದ ಬಗ್ಗೆ ಮಾತ್ರ ಕಾಂಗ್ರೆಸ್‌ನ ಹಾದಿಯನ್ನೇ ಒಪ್ಪಿದವು.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕಾಂಗ್ರೆಸ್ ಪಕ್ಷವಲ್ಲದೆ ಬೂರ್ಜ್ವಾ ಭೂಮಾಲಿಕ ವರ್ಗಗಳ ಇತರ ಪಕ್ಷಗಳೂ ಸಹ ಸಾಮಾಜಿಕ–ಆರ್ಥಿಕ ವಿಷಯಗಳ ಬಗ್ಗೆ ಕಾಂಗ್ರೆಸ್‌ನ ನೀತಿಯನ್ನೇ ಒಪ್ಪಿದವು. ಆದರೆ ವಿರೋಧಿ ಬಣದಲ್ಲಿದ್ದವು. ಆದರೆ ಇನ್ನೊಂದೆಡೆ ಈ ಪಕ್ಷಗಳಿಗೆ ವಿರುದ್ಧವಾಗಿ, ಶ್ರಮಜೀವಿ ಪ್ರಜಾಪ್ರಭುತ್ವದ ಬೆಳವಣಿಗೆಯ ಹಾದಿಗೆ ಬದ್ಧವಾದ ರಾಜಕೀಯ ಪಕ್ಷಗಳಿವೆ. ಇವುಗಳಲ್ಲಿ ಕೆಲಸಗಾರರು ಮತ್ತು ಹೋರಾಟ ಶೀಲ ಸಂಘಟನೆಗಳು ಸೇರಿಕೊಂಡಿವೆ.

1950ರ ಬೂರ್ಜ್ವಾ ಪ್ರಭುತ್ವ ಸಂವಿಧಾನದ ಅಳವಡಿಕೆಯ ನಂತರ ಅದರಲ್ಲೂ 1952ರ ಚುನಾವಣೆಗಳ ನಂತರದ ಭಾರತದ ರಾಜಕೀಯದಲ್ಲಿ ಈ ಎರಡು ವರ್ಗ ಸಂಯೋಜನೆಗಳ ನಡುವಿನ ಹೋರಾಟವೇ ಮುಖ್ಯ ಲಕ್ಷಣವಾಗಿದೆ.

ಮಾರ್ಕ್ಸ್‌ನ ಮರಣ ಶತಾಬ್ದಿಯ ಹಾಗೂ ಆತನಭಾರತದಮೇಲಿನ ಲೇಖನದ 130 ನೇ ವರ್ಷವಾದ 1983ನೇ ವರ್ಷ ಈ ಎರಡು ವರ್ಗಸಂಯೋಜನೆಗಳ ನಡುವಿನ ಹೆಚ್ಚಿನ ಘರ್ಷಣೆಯಿಂದ ಗಮನಾರ್ಹವಾಗಿದೆ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವ ಮತ್ತು ಆಳುವ ವರ್ಗಗಳು ಸರ್ವಾಧಿಕಾರವನ್ನು ತಡೆಗಟ್ಟುವ ಕಾರ್ಯದಲ್ಲಿ ಹೋರಾಡಲು ಸಿದ್ಧರಿರುವ ಎಲ್ಲರನ್ನೂ ಒಂದುಗೂಡಿಸುವಕೆಲಸದಲ್ಲಿ ಮಾರ್ಕ್ಸ್‌ವಾದಿ ಲೆನಿನ್ ವಾದಿಗಳು ಮುಂದಾಗಿದ್ದಾರೆ. ಇದರೊಂದಿಗೇ ತಮ್ಮ ಶ್ರಮಜೀವಿ ಜನರ ಹೋರಾಟ ಸಂಘಟನೆಗಳನ್ನು ಬೆಳೆಸಿ ಬಲಪಡಿಸುವುದೂ ಅವರ ಕರ್ತವ್ಯದ ದಾರಿಯಾಗಿದೆ. ಮಾರ್ಕ್ಸ್ ಬರಹಗಳ ಅದರಲ್ಲೂ ಭಾರತದ ಮೇಲಿನ ಲೇಖನಗಳ ತೀವ್ರ ಅಧ್ಯಯನ ತಮ್ಮ ಗುರಿಯನ್ನು ಸಾಧಿಸುವ ಕಾರ್ಯದಲ್ಲಿ ಅವರಿಗೆ ಬಹಳ ಸಹಾಯ ಮಾಡುತ್ತವೆ.

ಪಾರ್ಟಿ ಘಟಕಗಳಿಗೆ ಸೂಚನೆ

ಮೇ, ಜೂನ್ ತಿಂಗಳಲ್ಲಿ ನಡೆಯಲಿರುವ ಮುನಿಸಿಪಲ್ ಕಾರ್ಪೋರೇಷನ್, ನಗರಸಭೆ, ಪಂಚಾಯತಿ ಚುನಾವಣೆಗಳಲ್ಲಿ 18 ವರ್ಷಕ್ಕೆ ಮೇಲ್ಪಟ್ಟವರಿಗೆಲ್ಲ ಮತದಾನದ ಹಕ್ಕನ್ನು ಜನತಾ ಸರಕಾರ ಕೊಟ್ಟಿದೆ. 18 ವರ್ಷಕ್ಕೆ ಮೇಲ್ಪಟ್ಟವರನ್ನೆಲ್ಲ ಮತದಾರರ ಯಾದಿಯಲ್ಲಿ ಸೇರಿಸುವ ಕೆಲಸವನ್ನು ರಾಜ್ಯ ಸರಕಾರ ಕೈಗೊಂಡಿದ್ದು ಎಲ್ಲರ ಹೆಸರುಗಳು ಸೇರ್ಪಡೆಯಾಗುವಂತೆ ನೋಡಿಕೊಳ್ಳಬೇಕು.

21 ವರ್ಷಕ್ಕೆ ಮೇಲ್ಪಟ್ಟ ಹಲವಾರು ಜನರ ಹೆಸರುಗಳು ಮತದಾರರ ಯಾದಿಯಲ್ಲಿಲ್ಲದಿರುವುದು ಕಂಡು ಬಂದಿದೆ. ಹೊಸತಾಗಿ ಮತದಾರರನ್ನು ನೋಂದಾಯಿಸುವ ಅರ್ಜಿಯನ್ನು ತಹಶೀಲ್ದಾರ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು, ಅದನ್ನು ತುಂಬಿಸಿ ಕಳುಹಿಸಿಕೊಡುವ ಕೆಲಸವನ್ನು ಎಲ್ಲಾ ಪಾರ್ಟಿ ಘಟಕಗಳೂ ತುರ್ತುಕ್ರಮವಾಗಿ ಕೈಗೊಳ್ಳಬೇಕೆಂದು ರಾಜ್ಯ ಸಮಿತಿ ಕೇಳಿಕೊಳ್ಳುತ್ತದೆ.

ಕರ್ನಾಟಕದ ವಾರ್ಷಿಕ ಯೋಜನೆ

-ಎನ್. ಕೆ. ಉಪಾಧ್ಯಾಯ

ಕರ್ನಾಟಕ ರಾಜ್ಯದ 1983-84ನೇ ಸಾಲಿನ ವಾರ್ಷಿಕ ಯೋಜನೆಯ ಅಂದಾಜು ವೆಚ್ಚ 575 ಕೋಟಿ ರೂಪಾಯಿಗಳೆಂದು ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆಯವರು ಕೇಂದ್ರದ ಯೋಜನಾ ಮಂತ್ರಿ ಹಾಗೂ ಯೋಜನಾ ಆಯೋಗದೊಡನೆ ಪೂರ್ಣ ಚರ್ಚೆ ಮಾಡಿದ ನಂತರ ಹೊರಬಿದ್ದ ಸುದ್ದಿಯಾಗಿದೆ. 82-83ನೇ ವರ್ಷದ ಒಟ್ಟು ಖರ್ಚಿಗಿಂತ ಇದು ರೂ 100 ಕೋಟಿಯಷ್ಟು ಅಧಿಕವೆಂದು ಸಾರಲಾಗಿದೆ.

ಯೋಜನೆಯ ಮೂಲ ಸಮಸ್ಯೆಗಳು

ಯಾವುದೇ ಒಂದು ದೇಶದ ಅಥವ ರಾಜ್ಯದ ಯೋಜನೆಯ ಕುರಿತು ಚರ್ಚಿಸುವಾಗ ಕೆಲವು ಮೂಲಭೂತ ಸಮಸ್ಯೆಗಳು ಕಣ್ಣುಮುಂದೆ ಬರುತ್ತವೆ. ಯೋಜನಾ ಆಯೋಗ ಹಾಗೆಯೇ ಅಧಿಕಾರ ಚಲಾಯಿಸುವ ಪಕ್ಷಗಳೂ ಕೆಲವು ವಿಷಯಗಳನ್ನ ಗಂಭೀರವಾಗಿ ಗಮನಿಸಬೇಕಾಗುತ್ತದೆ. ಅವು ಯಾವುವೆಂದರೆ, ಜನರು ಎದುರಿಸುತ್ತಿರುವ ಮುಖ್ಯ ಪ್ರಶ್ನೆಗಳು, ತುರ್ತು ಪರಿಹಾರಗಳು, ದೀರ್ಘಕಾಲದ ಯೋಜನೆಗಳು, ದೀರ್ಘಾವಧಿಯ ಮತ್ತು ತುರ್ತು ಪರಿಹಾರಕ್ಕೆ ಬೇಕಾದ ಸಂಪನ್ಮೂಲಗಳು, ಎರಡೂ ತರದ ಅವಶ್ಯಕತೆಗಳ ಕುರಿತು ಸರಿಯಾದ ಯೋಜನೆ ಅವುಗಳನ್ನು ಕಾರ್ಯರೂಪದಲ್ಲಿ ತರಲು ನಿಷ್ಠಾವಂತ ಅಧಿಕಾರಿ ವರ್ಗ, ಮಧ್ಯೆ ಪ್ರವೇಶಿಸುವ ಸ್ವಾರ್ಥ ಸಾಧಕರನ್ನು ದೂರ ಸರಿಸುವ ದೃಢನಿರ್ಧಾರ, ಕೇಂದ್ರ ರಾಜ್ಯಗಳೊಳಗೆ ಸಂಯೋಜನೆ, ತಿಳುವಳಿಕೆ ಇವುಗಳೆಲ್ಲ ಅತ್ಯಗತ್ಯ.

ನಾವು ಬಂಡವಾಳಶಾಹಿ ಸಮಾಜದಲ್ಲಿ, ಬಂಡವಾಳಶಾಹಿ ಆಡಳಿತೆಗೊಳಪಟ್ಟಿರುವುದರಿಂದ ಜನರ ಅವಶ್ಯಕತೆಗಳ ಕುರಿತು ಹೆಚ್ಚು ವಿಚಾರ ಮಾಡದೆ ಅಧಿಕಾರವನ್ನ ಉಳಿಸಿಕೊಳ್ಳುವ, ಮತ ಗಳಿಸುವ ದೃಷ್ಟಿಕೋನಮಾತ್ರ ಯೋಜನೆಗಳನ್ನ ನಿರ್ಧರಿಸುವಾಗ ಪ್ರಾಧಾನ್ಯತೆ ಪಡೆಯುತ್ತದೆ. ಅಂತ ಆತಂಕಗಳನ್ನ ದೂರ ಸರಿಸುವುದು ಅತ್ಯಗತ್ಯ. ಸರಕಾರಕ್ಕೆ ಹೊಸ ದೃಷ್ಟಿಕೋನ ಒದಗಿಸುವುದರ ಸಲುವಾಗಿ ಶಿಸ್ತುಬದ್ಧವಾದ, ಮೇಲ್ಮಟ್ಟದ ಚಳುವಳಿ, ಹೋರಾಟಗಳು ನಡೆಯುವುದೂ ಅಷ್ಟೇ ಅವಶ್ಯಕವಾಗಿದೆ.

ಸಂಪನ್ಮೂಲಗಳು

ದೇಶದ ಹಾಗೂ ರಾಜ್ಯದ ಯೋಜನೆಗಳಿಗೆ, ಜಗತ್ತಿನ ಬೇರೆ ಬೇರೆ ದೇಶದ ಸರಕಾರಗಳು ಅಪಾರ ಸಹಾಯ ನೀಡುತ್ತಿರುವುದು ಕಂಡುಬರುತ್ತದೆ. ಅವುಗಳೆಲ್ಲ ಹೆಚ್ಚಾಗಿ ಕೇಂದ್ರ ಸರಕಾರದ ಸಮ್ಮತಿಯಿಂದಲೇ ದೊರೆಯುತ್ತವೆ. ಕೆಲವು ರಾಜ್ಯಸರಕಾರಗಳೂ ಕೇಂದ್ರದ ಅನುಮತಿಯಿಂದ ನೇರ ಸಹಾಯ ಪಡೆಯಲೂ ಪ್ರಯತ್ನ ಮಾಡುತ್ತಿವೆ. ಆದರೆ ಅಂಥವು ಬಹಳ ವಿರಳ. ಡೈರಿ ಅಭಿವೃದ್ಧಿ, ಕುರಿಸಾಕಾಣಿಕೆ. ಗ್ರಾಮಾಂತರ ಪ್ರದೇಶದ ಅಭಿವೃದ್ಧಿ, ಬಾವಿ, ಕೆರೆಗಳ ನಿರ್ಮಾಣ, ಗೃಹ ನಿರ್ಮಾಣ, ನೀರಾವರಿ, ವಿದ್ಯುಚ್ಛಕ್ತಿ ಯೋಜನೆ, ದೊಡ್ಡ ಕೈಗಾರಿಕೆ, ಎಣ್ಣೆ ಸಂಶೋಧನೆ ಹೀಗೆ ಹಲವಾರು ರೀತಿಯಿಂದ ವಿದೇಶಿ ಸಹಾಯ ಸಿಗುತ್ತಿದೆ. ಹೊಸ ಕರಗಳ ಮೂಲಕ ರಾಜ್ಯ-ಕೇಂದ್ರ ಸರ್ಕಾರಗಳೂ ಸಂಪನ್ಮೂಲ ಹೆಚ್ಚಿಸಿಕೊಳ್ಳುತ್ತಿವೆ. ಬ್ಯಾಂಕು ಮತ್ತು ಇತರ ಹಲವಾರು ಆರ್ಥಿಕ ಸಂಸ್ಥೆಗಳ ಮೂಲಕ ಪೂ ಹಣದ ವ್ಯವಸ್ಥೆ ಮಾಡಲಾಗುತ್ತಿದೆ.

ಸದುಪಯೋಗಕ್ಕೆ ಆತಂಕ

ಈ ಸಂಪತ್ತೆಲ್ಲ ಸರಿಯಾಗಿ ಉಪಯೋಗವಾಗುತ್ತಿಲ್ಲವೆಂಬ ದೂರನ್ನು ಯಾವಾಗಲೂ ಕೇಳುತ್ತಿದ್ದೇವೆ. ಅದು ನಿಜವಾದ ಸಂಗತಿ. ಅನಾವಶ್ಯಕ ಅಧಿಕಾರಿಗಳ ನೇಮಕ, ಅವರಿಗೆ ವಸತಿ ವಾಹನ ಸೌಲಭ್ಯ, ವಿಶೇಷ ಭತ್ಯೆಗಳು-ಇವುಗಳ ಮೇಲೆ ಹಿಡಿತವಿಲ್ಲ. ಯೋಜನೆಗಿಂತ ಹೆಚ್ಚಾಗಿ ಅಧಿಕಾರಿಗಳ-ಸಿಬ್ಬಂದಿಯ ಅನುಕೂಲತೆಗಳಿಗಾಗಿಯೇ ಹೆಚ್ಚು ಹಣ ವ್ಯಯವಾಗುತ್ತಿದೆ. ಪುಢಾರಿಗಳ, ಸ್ವಾರ್ಥಸಾಧಕರ ಮಧ್ಯ ಪ್ರವೇಶದಿಂದ ಯೋಜನೆಗಳು ಪೂರ್ತಿಗೊಳ್ಳದೆ, ವರ್ಷಾನುಗಟ್ಟಲೆ ತಡೆಹಿಡಿಯಲ್ಪಟ್ಟು, ಹಣದ ದುರುಪಯೋಗವಾಗುತ್ತಿದೆ. ಯಾವ ಉದ್ದೇಶದ ಸಲುವಾಗಿ ಹಣ ಕೊಡಲಾಗುತ್ತಿದೆಯೋ ಅದಕ್ಕಾಗಿ ಹಣ ಖರ್ಚಾಗುತ್ತಿಲ್ಲ. ಧನಸಹಾಯ ಪಡೆಯುವುದರಲ್ಲಿ ಶೇ. 99ರಷ್ಟು ದುರುಪಯೋಗ ಮಾಡುತ್ತಿರುವುದೇ ವಾಸ್ತವ ಸಂಗತಿಯಾಗಿದೆ. ಬೇರೆ ಬೇರೆ ಪರಿಸ್ಥಿತಿಯಲ್ಲಿ ಅಧಿಕಾರಿಗಳೂ ತಂತಮ್ಮ ನಿಲುಮೆಗಳನ್ನು ರಾಜಕೀಯ ಒತ್ತಡಕ್ಕಾಗಿ ಬದಲಾಯಿಸಿ ಯೋಜನೆಗಳ ಮುಂದುವರಿಕೆಗೆ ಅಡ್ಡಿಯನ್ನುಂಟುಮಾಡುತ್ತಿದ್ದಾರೆ. ಹೀಗಾಗಿ ಸಂಪನ್ಮೂಲಗಳು ಸಾಕಷ್ಟಿದ್ದರೂ ಸದುಪಯೋಗವಾಗುತ್ತಿಲ್ಲ.

ಸರ್ಕಾರಕ್ಕೆ ನಿರ್ದಿಷ್ಟ ನಿಲುಮೆಗಳಿಲ್ಲ

ಯೋಜನೆಗಳ ಕುರಿತು ಸರ್ಕಾರಕ್ಕೆ ನಿರ್ದಿಷ್ಟ ನಿಲುಮೆ ಅತ್ಯಗತ್ಯ. ದೀರ್ಘಕಾಲದ ಯೋಜನೆಗಳು, ಅಲ್ಪಕಾಲದ, ತುರ್ತುಬೇಕಾದ ಯೋಜನೆಗಳು. ಆಯಾ ರಾಜ್ಯದ ಅಭಿವೃದ್ಧಿಗಾಗಿ, ನೈಸರ್ಗಿಕ ಸಂಪನ್ಮೂಲಗಳ ಉಪಯೋಗಕ್ಕಾಗಿ, ಜನರಿಗೆ ಅತ್ಯಾವಶ್ಯಕತೆಗಳನ್ನು ಒದಗಿಸುವ ಸಲುವಾಗಿ ತುರ್ತು ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ನೂರಾರು ತರಹ ಯೋಜನೆಗಳು ಬೇಕೇಬೇಕು. ಮೂವತ್ತಮೂರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ಸಿನ ಆಡಳಿತ ನಡೆಸುತ್ತ ಬಂದಿದ್ದರೂ ಕೂಡ, ನಮ್ಮ ರಾಜ್ಯದಲ್ಲಿ ಬಂದರುಗಳ, ನದಿ ನೀರು, ಕೆರೆ, ಬಾವಿಗಳ, ಮಲೆನಾಡು, ಅರಣ್ಯ, ಗಣಿಗಳ-ಅಭಿವೃದ್ಧಿ, ಸದುಪಯೋಗ ಸರಿಯಾಗಿ ಆಗುತ್ತಿಲ್ಲ. ಬರಗಾಲ ನಿವಾರಣೆ, ಕುಡಿಯುವ ನೀರು ಪೂರೈಕೆ, ಶಾಲೆ, ಕಾಲೇಜುಗಳಿಗೆ ಕಟ್ಟಡ, ಗೃಹನಿರ್ಮಾಣ ಕೈಗಾರಿಕಾಭಿವೃದ್ಧಿ, ರೇಲ್ವೆ ಬೆಳವಣಿಗೆ ಯಾವುದರಲ್ಲೂ ಪ್ರಗತಿ ಸಾಧಿಸಿರುವುದಿಲ್ಲ. ಸರಿಯಾದ ಯೋಜನೆಗಳ ದೃಷ್ಟಿಕೋನದ ಅಭಾವವೇ ಇದಕ್ಕೆಲ್ಲ ಮುಖ್ಯ ಕಾರಣ. ಈ ಕಾರಣದಿಂದಲೇ ದೇಶದಲ್ಲೇ ವಿದ್ಯುಚ್ಛಕ್ತಿಯಲ್ಲಿ ಅತ್ಯಂತ ಮುಂದುವರಿದಿದ್ದ ನಮ್ಮ ರಾಜ್ಯ, ನೆರೆ ರಾಜ್ಯಗಳಿಗೆ ಭಿಕ್ಷೆ ಬೇಡುವ ಗತಿಗೆ ಇಳಿದಿದೆ. ಇದಕ್ಕೆ ಜಲಸಂಪತ್ತಿನ ಅಭಾವವಿಲ್ಲ. ಆದರೆ ಶರಾವತಿ, ಕಾಳಿ ಹಾಗೆಯೇ ಇತರ ಯೋಜನೆಗಳನ್ನು ಒಂದಲ್ಲೊಂದು ಕಾರಣದಿಂದ ಅಲಕ್ಷ್ಯಗೊಳಿಸುತ್ತಿರುವುದೇ. ಯಾವ ಯೋಜನೆಗಳಿಗೆ ಪ್ರಾಧಾನ್ಯತೆ ಕೊಡಬೇಕೆಂದು ನಿರ್ದಿಷ್ಟ ನಿಲುಮೆ ಇಲ್ಲದಿರುವುದೇ ಮುಖ್ಯ ಕಾರಣವಾಗಿದೆ. ಹೀಗಾಗಿಯೇ ಕೃಷ್ಣಾ, ಮಲಪ್ರಭಾ ಮುಂತಾದ ಯೋಜನೆಗಳು ಕುಂಟುತ್ತ ನಡೆದಿವೆ. ಮಲೆನಾಡು ಅಭಿವೃದ್ಧಿ, ಬಂದರು, ಉಕ್ಕಿನ ಕಾರ್ಖಾನೆಗಳೆಲ್ಲ ಬೆಳಕು ಕಾಣಲಾರದಾಗಿ ಉಳಿದಿವೆ. ಬರಗಾಲ ನಿವಾರಣೆಗಾಗಿ ಯಾವ ಯೋಜನೆಯೂ ಇಲ್ಲದಂತಾಗಿದೆ.

ಇಂಥ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯದ ಒಂದು ವರ್ಷದ ಯೋಜನೆಯ ರೂಪರೇಷೆ ತಯಾರಿಸಿ ಕೇಂದ್ರದ ಒಪ್ಪಿಗೆ ಮತ್ತು ಹಣ ಕೇಳಲಾಗಿದೆ.

ವಾರ್ಷಿಕ ಯೋಜನೆಯ ರೂಪರೇಷೆ

1983-84ರ ವಾರ್ಷಿಕ ವೆಚ್ಚ ರೂ 575 ಕೋಟಿ. ಹರಿಜನ, ಗಿರಿಜನ, ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ರೂ. 119.14 ಕೋಟಿ (ಸದ್ಯದ ವರ್ಷ ರೂ. 94 ಕೋಟಿ). ಕೃಷಿ ಮತ್ತು ಇತರ ಸಂಬಂಧಿಸಿದ ಚಟುವಟಿಕೆಗಳಿಗಾಗಿ ರೂ. 98 ಕೋಟಿ (ಈ ವರ್ಷ ರೂ. 72 ಕೋಟಿ) ನೀರಾವರಿ ಯೋಜನೆಗಳಿಗಾಗಿ, ರೂ. 225 ಕೋಟಿ (ಚಾಲ್ತಿ ವರ್ಷ ರೂ. 223 ಕೋಟಿ), ಔದ್ಯೋಗಿಕ ಅಭಿವೃದ್ಧಿಗಾಗಿ ರೂ. 49.84 ಕೋಟಿ (ಚಾಲ್ತಿ ವರ್ಷ ರೂ. 37 ಕೋಟಿ). ಈ ರೀತಿ ಕೆಲವು ಮುಖ್ಯ ವಿವರಣೆಗಳನ್ನು ಕೊಡಲಾಗಿದೆ. ಇದರ ಜೊತೆಯಲ್ಲಿ "ಅಂತ್ಯೋದಯ ಯೋಜನೆಯನ್ನು ಕಾರ್ಯರೂಪದಲ್ಲಿ ತರಲಾಗುವುದೆಂದು ಗೃಹ ಮತ್ತು ಚಿಕ್ಕ ಕೈಗಾರಿಕೆಗಳಿಗೂ ಗ್ರಾಮಾಂತರ ಕೈಗಾರಿಕೆಗಳಿಗೂ ಯೋಗ್ಯ ಹಣದ ವ್ಯವಸ್ಥೆ ಮಾಡಲಾಗುವುದೆಂದೂ ಹೇಳಲಾಗಿದೆ. ವಿದ್ಯುತ್ ಯೋಜನೆಗೂ ಪ್ರಾಧಾನ್ಯತೆ ನೀಡಲಾಗುವುದಂತೆ. ಕಲೆ ಮತ್ತು ಸಂಸ್ಕೃತಿಯ ಬೆಳವಣಿಗೆಗೂ ಪ್ರೋತ್ಸಾಹ ನೀಡಲಾಗುವುದೆಂಬ ಅಭಿಲಾಷೆ ವ್ಯಕ್ತ ಮಾಡಲಾಗಿದೆ. ರಾಮಕೃಷ್ಣ ಹೆಗಡೆಯವರಿಂದ. ಈಗಿನ ಪರಿಸ್ಥಿತಿಯಲ್ಲಿ ಅಂದರೆ 33 ವರ್ಷ ಕಾಂಗ್ರೆಸ್ ಆಡಳಿತ ಮುಕ್ತಾಯಗೊಳಿಸಿ, ಜನತಾ, ಕ್ರಾಂತಿರಂಗ, ಸಿ.ಪಿ.ಐ-ಎಂ ಮತ್ತು ಸಿ.ಪಿ.ಐ. ಪಕ್ಷಗಳ ಬೆಂಬಲದಿಂದ ಕೆಲವೇ ದಿವಸಗಳ ಹಿಂದೆ ಅಧಿಕಾರಕ್ಕೆ ಬಂದಿರುವಂಥ ಜನತಾಪಕ್ಷದ ಸರಕಾರದ ಪ್ರಯತ್ನಕ್ಕೆ ಸ್ವಾಗತ ನೀಡೋಣ.

ಆದರೆ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ವಾರ್ಷಿಕ ಯೋಜನೆಯ ರೂಪರೇಷೆ ಹಾಗೆಯೇ ಅದಕ್ಕೆ ಬೇಕಾದ ಸಂಪನ್ಮೂಲ ಮತ್ತು ಕೇಂದ್ರದ ಸಹಾಯದ ಕುರಿತು ಕೇಂದ್ರ ಸರ್ಕಾರವನ್ನು ಯೋಜನಾ ಆಯೋಗವನ್ನೂ ವಿಚಾರಿಸುವ ಮುಂಚೆ ಈ ನಾಲ್ಕು ಪಕ್ಷಗಳ ಮುಖಂಡರನ್ನು ಕರೆಸಿ, ವಿಚಾರ ವಿನಿಮಯಮಾಡಿ, ಅವರ ಅಭಿಪ್ರಾಯವನ್ನು ಕೇಳುವುದು ಅಗತ್ಯವಾಗಿತ್ತು. ಯೋಜನೆಗಳ ಸಫಲತೆ-ವಿಫಲತೆಗಳು, ಬರೇ ರಾಮಕೃಷ್ಣ ಹೆಗಡೆ, ಜನತಾ ಪಾರ್ಟಿ ಮೇಲಷ್ಟೇ ಪರಿಣಾಮ ಬೀರುವುದಿಲ್ಲ, ಜನತಾ ಸರ್ಕಾರಕ್ಕೆ ಬೆಂಬಲ ನೀಡುತ್ತಿರುವ ಪಕ್ಷಗಳ ಮೇಲೂ ಪರಿಣಾಮ ಉಂಟಾಗುತ್ತದೆ. ಸಿ.ಪಿ.ಐ. ಮತ್ತು ಸಿ.ಪಿ.ಐ-ಎಂ ಸರ್ಕಾರದಲ್ಲಿ ನೇರವಾಗಿ ಪಾಲ್ಗೊಳ್ಳದಿದ್ದರೂ ಕೂಡ ನೈತಿಕವಾಗಿ ಸರಕಾರದ ಆಗುಹೋಗುಗಳಲ್ಲಿ ಅಭಿಪ್ರಾಯ ವ್ಯಕ್ತಮಾಡುವ ಅಧಿಕಾರ ಹೊಂದಿರುತ್ತದೆಂಬುದನ್ನು ಮರೆಯುವಂತಿಲ್ಲ. ಈ ದಿಸೆಯಲ್ಲಿ ರಾಮಕೃಷ್ಣ ಹೆಗಡೆಯವರು ಸ್ವಲ್ಪ ಎಡವಿದ್ದಾರೆಂದು ಇನ್ನು ಮುಂದಾದರೂ ಇದನ್ನು ತಿದ್ದಿಕೊಳ್ಳುತ್ತಾರೆಂದೇ ಅಪೇಕ್ಷಿಸೋಣ.

ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಗುಡಿ ಕೈಗಾರಿಕೆಗಳು, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಸಮಸ್ಯೆಗಳನ್ನು ಅಭ್ಯಂತರವಿಲ್ಲದೆ ನಡೆಯುಬೇಕಾದ್ದೆ ಸಂಶಯವಿಲ್ಲ. ಆದರೆ ಕರ್ನಾಟಕ ರಾಜ್ಯದ ಅಭಿವೃದ್ಧಿ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಳ್ಳುವಾಗ ವಾರ್ಷಿಕ ಯೋಜನೆಯಲ್ಲಿ ನೀರಾವರಿ, ವಿದ್ಯುಚ್ಛಕ್ತಿ, ಕೈಗಾರಿಕೆ, ಕುಡಿಯುವ ನೀರು ಅಲ್ಲದೆ ಇವುಗಳ ಜೊತೆಯಲ್ಲೇ ಶಿಕ್ಷಣ, ನಿರುದ್ಯೋಗ ಸಮಸ್ಯೆ, ಭೂ ಸಮಸ್ಯೆಗಳಿಗೆ ವಿಶೇಷ ಗಮನ ಹರಿಸುವುದು ಅಗತ್ಯವೆಂಬುದನ್ನು ಮರೆಯಬಾರದು.

1983-84ರ ಯೋಜನೆಗಾಗಿ ರೂ 100 ಕೋಟಿ ಹೆಚ್ಚಿಗೆ ಖರ್ಚುಮಾಡಲಾಗುವುದೆಂದು ಹೇಳಿದಾಕ್ಷಣ ಹೆಮ್ಮೆಪಡುವ ಕಾರಣವಿಲ್ಲ. ತೀವ್ರಗತಿಯಿಂದ ಬೆಲೆ ಹೆಚ್ಚಾಗುತ್ತಿರುವ ಈ ಕಾಲದಲ್ಲಿ ರೂ. 100 ಕೋಟಿಯಲ್ಲಿ ಒಂದು ರೂಪಾಯಿ ಕೂಡ ಹೆಚ್ಚಿನ ಕೆಲಸಕ್ಕೆ ಲಭ್ಯವಾಗುವುದಿಲ್ಲವೆಂಬುದನ್ನು ಗಮನದಲ್ಲಿಡಬೇಕು. ರೂ. 100 ಕೋಟಿಯನ್ನು ಅಂದಾಜಿನ ಬೆಲೆ ಹೆಚ್ಚಳವೇ ನುಂಗಿ ಬಿಡುತ್ತದೆ. ಅಷ್ಟೇ ಅಲ್ಲ ಮುಖ್ಯಮಂತ್ರಿಯವರೇ ಹೇಳಿದಂತೆ ಈ ಹೆಚ್ಚಿನ ರೂ. 100 ಕೋಟಿ ಕೇಂದ್ರದ ಸಹಾಯವಾಗಿ ಬರುತ್ತಿಲ್ಲ. ತೆರಿಗೆ ಹೆಚ್ಚಳ ಮತ್ತು ಆಡಳಿತ ಖರ್ಚಿನ ಕಡಿತದ ಮೂಲಕ ರೂ. 80 ಕೋಟಿ, ಕೇಂದ್ರದಿಂದ ಬರೇ ರೂ. 14 ಕೋಟಿ ಮತ್ತು ಸಾರ್ವಜನಿಕ ಸಾಲಗಳಿಂದ ರೂ. 4 ಕೋಟಿ. ಇನ್ನು 2 ಕೋಟಿಗೆ ಮೂಲ ಹುಡುಕಬೇಕಾಗಿದೆ.

ನಮ್ಮ ರಾಜ್ಯ ಅತ್ಯಾವಶ್ಯಕವಾಗಿ ಎದುರಿಸಬೇಕಾಗಿರುವ ಮುಖ್ಯ ಪ್ರಶ್ನೆ ಯಾವುದೆಂದರೆ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ; ಎರಡನೆಯದಾಗಿ ಅರ್ಧಕ್ಕೆ ನಿಂತಿರುವ ಬೃಹತ್ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸುವಿಕೆ. ಇದರ ಜೊತೆಯಲ್ಲೇ ಹೊಸ ಕೈಗಾರಿಕೆ, ಬಂದರು-ರೇಲ್ವೆ ಅಭಿವೃದ್ಧಿಗಳೂ ಸೇರಿವೆ. ವಿದ್ಯುತ್ತು ಮತ್ತು ನೀರು ಇಲ್ಲದೆ ರಾಜ್ಯದ ಹಿಂಜರಿತವನ್ನು ನಿಲ್ಲಿಸಲು ಸಾಧ್ಯವಿಲ್ಲ. ಈ ದೃಷ್ಟಿಯಲ್ಲಿ ಈ ಯೋಜನೆಗಳಿಗಾಗಿ ಮೀಸಲಾಗಿಟ್ಟ ಹಣ ಅಸಮರ್ಪಕವೆಂದೇ ಹೇಳಬೇಕಾಗುತ್ತದೆ.

ಮಲೆನಾಡು ಅಭಿವೃದ್ಧಿಯ ಸೂಚನೆಯೇ ಈ ಯೋಜನೆಯಲ್ಲಿಲ್ಲ. ಮಲೆನಾಡು ಅಭಿವೃದ್ಧಿ ಕಾರ್ಯ ನಿಸರ್ಗದಲ್ಲಿ ಹುದುಗಿರುವ ನೈಸರ್ಗಿಕ ಸಂಪತ್ತಿನ ಉಪಯೋಗಮಾಡಿಕೊಂಡು, ಅದರಿಂದ ವಿದ್ಯುತ್ ಕೈಗಾರಿಕೆ, ತೋಟ ಬೆಳವಣಿಗೆ ಹಾಗೆಯೇ ಅವುಗಳ ಮೂಲಕ ನಿರುದ್ಯೋಗ ಸಮಸ್ಯೆಯ ಪರಿಹಾರ - ಇವುಗಳಿಗೆಲ್ಲ ಪರಿಹಾರ ಸೂಚಕವಾಗಿವೆ. ಆದ್ದರಿಂದ ಈ ಯೋಜನೆಯನ್ನು ಕೈಬಿಟ್ಟದ್ದು ಸರಿಯಲ್ಲ.

ರಾಜಕೀಯ ಪಕ್ಷಗಳ ಮತ್ತು ತಜ್ಞರ ಸಭೆ ಕರೆದು ಯೋಜನೆಯನ್ನು ಚರ್ಚಿಸಿ ಮೂರ್ತ ಸ್ವರೂಪ ಕೊಡುವುದು ಅತ್ಯಗತ್ಯ. ಈ ದಿಸೆಯಲ್ಲಿ ರಾಮಕೃಷ್ಣ ಹೆಗಡೆಯವರು ದಿಟ್ಟ ಹೆಜ್ಜೆ ಇಡುವುದು ಅತ್ಯಗತ್ಯ.

ಬರಗಾಲ ಪರಿಹಾರದ ಕಾರ್ಯವನ್ನು ಬರೇ ರಾಜಕೀಯ ಡೊಂಬರಾಟವಾಗಿಯೂ, ಭ್ರಷ್ಟಾಚಾರಕ್ಕೆ ತವರುಮನೆಯನ್ನಾಗಿಯೂ ಮಾಡಿತ್ತು ಕಾಂಗ್ರೆಸ್ ಆಡಳಿತ. ರಾಮಕೃಷ್ಣ ಹೆಗ್ಡೆಯವರು, ಈ ಸಮಸ್ಯೆಯತ್ತ ಲಕ್ಷ ಹರಿಸಿ ಕೇಂದ್ರದಿಂದ ರೂ. 30 ಕೋಟಿ ಸಹಾಯ ಬೇಡಿದ್ದು ಸರಿಯಾದ ಕ್ರಮ ಆದರೆ ಬರಗಾಲ ಪರಿಹಾರ ಕಾರ್ಯಕ್ರಮಕ್ಕೆ ಈ ಹಣ ಖರ್ಚು ಮಾಡುವ ಮುಂಚೆ ರಾಜಕೀಯ ಪಕ್ಷಗಳ, ರೈತ ಸಂಘದ ಮುಖಂಡರೊಡನೆ ವಿಚಾರ ವಿನಿಮಯ ಮಾಡಿ, ಅವರ ಸಲಹೆ ಪಡೆದು, ಅವರ ಮಾರ್ಗದರ್ಶನದಲ್ಲಿ ಕಾರ್ಯ ಕೈಗೊಂಡರೆ ಹೆಚ್ಚು ಫಲಕಾರಿಯಾಗಬಹುದು. ದುಂದುವೆಚ್ಚ, ದುರುಪಯೋಗ ಖರ್ಚುಗಳನ್ನೆಲ್ಲ ತಡೆಹಿಡಿಯಬಹುದು.

ರಾಜ್ಯಗಳ ಸಂಪತ್ತನ್ನೆಲ್ಲ ಸೂರೆ ಮಾಡುವ ಕೇಂದ್ರ ಸರ್ಕಾರ, ಆದರ ಬಹು ಮುಖ್ಯ ಪಾಲನ್ನು ರಾಜ್ಯಗಳಿಗೆ

(7ನೇ ಪುಟ ನೋಡಿ)

ಕರ್ನಾಟಕದ ವಾರ್ಷಿಕ ಯೋಜನೆ

(6ನೇ ಪುಟದಿಂದ)

ಕೊಡುವುದು ಅತ್ಯಗತ್ಯ. ಇಲ್ಲವಾದರೆ ರಾಜ್ಯದ ಜನರ ಮೇಲೆ ಹೆಚ್ಚಿನ ಕರಭಾರ ಹೇರಬೇಕಾಗುತ್ತದೆ. ಆದ್ದರಿಂದ ಸಿ.ಪಿ.ಐ-ಎಂ ಮುಖಂಡತ್ವದ ಪಶ್ಚಿಮ ಬಂಗಾಲದ ಎಡರಂಗ ಸರ್ಕಾರ ಹೆಚ್ಚಿನ ಧನಸಹಾಯ ಕೋರಿ ಕೇಂದ್ರ ಸರಕಾರದ ಜೊತೆ ಹೋರಾಡುತ್ತಿರುವಂತೆಯೇ, ನಮ್ಮ ರಾಜ್ಯದ ಅತ್ಯಾವಶ್ಯಕ ಯೋಜನೆಗಳ ಪೂರೈಕೆಗಾಗಿಯೂ ಕೇಂದ್ರದಿಂದ ಹೆಚ್ಚು ಹಣ ಸಹಾಯ ಪಡೆಯುವುದು ಅತ್ಯಗತ್ಯವಾಗಿದೆ. ಈ ದಿಸೆಯಲ್ಲಿ ಕೂಡ ರಾಮಕೃಷ್ಣ ಹೆಗಡೆಯವರ ಸರ್ಕಾರ "ಸಿಕ್ಕಿದ್ದರಲ್ಲೇ ಸಂತೃಪ್ತಿ ಪಡದೆ" ರಾಜ್ಯದ ಹಿತ ದೃಷ್ಟಿಯಿಂದ ಕೇಂದ್ರದಿಂದ ಹೆಚ್ಚಿಗೆ ಸಹಾಯ ಪಡೆಯಲು ಪ್ರಯತ್ನಿಸುವುದು ಅತ್ಯಗತ್ಯ.

ಹೊಸ ತೆರಿಗೆಗಳ ಮೂಲಕ ರೂ. 80 ಕೋಟಿ ಹಣ ಸಂಗ್ರಹಿಸಬೇಕಾಗಿದೆಯೆಂದು ಹೇಳಲಾಗಿದೆ. ಮಾರ್ಚ್ ತಿಂಗಳಲ್ಲಿ ಸೇರುವ ವಿಧಾನಸಭೆಯಲ್ಲಿ ಅಂದಾಜು ಪತ್ರಿಕೆ ಚರ್ಚೆಗೆ ಬರುವಾಗ ಈ ವಿಷಯ ಕುರಿತು ರಾಮಕೃಷ್ಣ ಹೆಗಡೆಯವರು ತಮ್ಮ ಸೂಚನೆಯನ್ನು ಮಂಡಿಸಬಹುದು.

ಪ್ರೊಫೆಶನ್ ಟ್ಯಾಕ್ಸನ್ನು ರದ್ದು ಮಾಡಬೇಕೆಂಬ ಒತ್ತಾಯ ಹೆಚ್ಚಾಗಿ ಬರುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಹೊಸ ತೆರಿಗೆಗಳ ಆಕರಣೆ ಯಾವ ರೀತಿ ತಾಳಬೇಕಾದಿತೆಂಬ ವಿಷಯದ ಕುರಿತು ಕೂಡ ಮುಖ್ಯಮಂತ್ರಿಯವರು ಗೆಳೆಯ ರಾಜಕೀಯ ಪಕ್ಷಗಳ ಜೊತೆಯಲ್ಲಿ ಮುಂಚಿತವಾಗಿಯೇ ಚರ್ಚೆ ಮಾಡುವುದು ಉತ್ತಮ ಇಲ್ಲವಾದ್ದರೆ ತಪ್ಪು ತಿಳುವಳಿಗೆ ಮತ್ತು ಗೊಂದಲ ಉಂಟಾಗಬಹುದು. ವಿರೋಧಿಗಳು ಅದರ ಲಾಭ ಪಡೆಯಬಹುದು.

575 ಕೋಟಿಯ ವಾರ್ಷಿಕ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ಯೋಜನಾ ಆಯೋಗ ಒಪ್ಪಿಕೊಂಡಿದೆಯೆಂದಾಗಲೀ, ಚಾಲ್ತಿ ವರ್ಷಕ್ಕಿಂತ ಮುಂದಿನ ವರ್ಷ ಖರ್ಚು ಮಾಡಲು 100 ಕೋಟಿ ಹೆಚ್ಚಿಗೆ ಹಣ ದೊರೆಯುತ್ತದೆಂದಾಗಲೀ, ರಾಮಕೃಷ್ಣ ಹೆಗಡೆಯವರಾಗಲೀ, ರಾಜ್ಯದ ಜನತೆಯಾಗಲಿ ಎದೆಯುಬ್ಬಿಸಿ ತಿರುಗಾಡುವುದು ಬೇಡ. ಅತಿ ಪ್ರಸರಣ, ಬೆಲೆ ಹೆಚ್ಚಳ, ಭ್ರಷ್ಟಾಚಾರಗಳೆಲ್ಲ ಕೋಟಿ ಕೋಟಿ ರೂಪಾಯಿಗಳನ್ನು ನುಂಗುತ್ತಿರುವಾಗ, ಜನರ ಯೋಗಕ್ಷೇಮಗಳ ಕುರಿತು ಅಲ್ಪ ಸಹಾಯ ಒದಗಿಸಲು ಮುಂದಿನ ವರ್ಷ ಕಷ್ಟವಾಗಬಹುದು. ಆದ್ದರಿಂದ ಆ ಮಹಾಕಾರ್ಯವನ್ನು ಯಾವ ರೀತಿ ಪೂರೈಸಿ ಕೊಡಬಹುದೆಂಬುದನ್ನು ಆಳವಾಗಿ, ಸಂಯುಕ್ತವಾಗಿ ಎಲ್ಲರೊಡನೆ ವಿಚಾರಮಾಡಿ ಕಾರ್ಯಪ್ರವೃತ್ತರಾಗುವುದು ಅತ್ಯಗತ್ಯ. ಆ ದಿಕ್ಕಿನಲ್ಲಿ ಮುನ್ನಡೆಯೋಣ.

ಬಿ.ಇ.ಎಲ್. ಕಾರ್ಮಿಕರಿಂದ ಕಾ॥ ಸೂರಿಗೆ ಸನ್ಮಾನ

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಭಾರಿ ಬಹುಮತದಿಂದ ಚುನಾಯಿತರಾದ ಕಾ. ಸೂರಿಯವರನ್ನು ಸನ್ಮಾನಿಸಲು ಬಿ.ಇ.ಎಲ್. ವರ್ಕರ್ಸ್ ಯೂನಿಯನ್ ತೀರ್ಮಾನಿಸಿ. ತಾ॥ 15-2-83 ರಂದು ಆಹ್ವಾನಿಸಲಾಯಿತು. ಮೊದಲು ಕಾರ್ಖಾನೆಯ ಮುಖ್ಯ ದ್ವಾರದ ಆವರಣದಲ್ಲಿ ಸನ್ಮಾನಿಸಬೇಕೆಂದು ತೀರ್ಮಾನಿಸಲಾಗಿದ್ದು ಆದರೆ ಕಾರ್ಖಾನೆಯ ಆಡಳಿತವರ್ಗ ಮತ್ತು ಬೇರೆ ಕಾರ್ಮಿಕ ಸಂಘಗಳ ಕಾರ್ಮಿಕ ವಿರೋಧಿ ನೀತಿಯಿಂದ ಕಾರ್ಖಾನೆಯ ಮುಖ್ಯ ದ್ವಾರದ ಬಳಿ ಕಾ॥ ಸೂರಿಯನ್ನು ಬಿಡದೆ ತಡೆದರು, ನಂತರ ಅಸಮಾಧಾನದಿಂದ ಕಾರ್ಮಿಕರು ಬೇಸತ್ತು ಬೇರೆ ಸ್ಥಳದಲ್ಲಿ ಸಭೆ ನಡೆಸಿ ಕಾ॥ ಸೂರಿಯನ್ನು ಸನ್ಮಾನಿಸಲಾಯಿತು ಈ ಸಭೆಯಲ್ಲಿ ಸುಮಾರು 1500 ಕಾರ್ಮಿಕರು ಭಾಗವಹಿಸಿದ್ದರು.

ಸಭೆಯನ್ನು ಸಿಐಟಿಯು ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಮುನಿರೆಡ್ಡಿ ಸ್ವಾಗತ ಮಾಡುತ್ತಾ ಆಡಳಿತ ವರ್ಗ ಮತ್ತು ಬೇರೆ ಕಾರ್ಮಿಕ ಸಂಘಗಳ ನೀತಿಯನ್ನು ಖಂಡಿಸಿದರು.

ನಂತರ ಸಂಘದ ಅಧ್ಯಕ್ಷರು ಹಾಗೂ ಶಾಸಕರು ಆದಂತ ಕಾ॥ ಸೂರಿಯವರು ಮಾತನಾಡುತ್ತಾ ಬಿ. ಇ. ಎಲ್. ನಲ್ಲಿ ಕಾರ್ಮಿಕರ ಐಕ್ಯತೆ ಕಾಪಾಡಲು ಸಿಐಟಿಯು ಸದಾ ಸಿದ್ಧ ಎಂದು ತಿಳಿಸಿ, ಚುನಾವಣೆ ಮುಖಾಂತರ ಕಾರ್ಮಿಕರಿಗೆ ಬೇಕಾದ ಅಧ್ಯಕ್ಷರನ್ನು ಚುನಾಯಿಸಲು ಬೇರೆ ಕಾರ್ಮಿಕ ಸಂಘದ ನಾಯಕರು ಒಪ್ಪಿದರೆ ಸಿಐಟಿಯು ಸಂಘವನ್ನು ವಿಸರ್ಜನೆ ಮಾಡಲು ಸಿದ್ಧವೆಂದು ತಿಳಿಸಿದರು.

ಸಭೆ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಬದಲಾದ ಪರಿಸ್ಥಿತಿಯಲ್ಲಿ ರೈತ ಸಂಘಟನೆ ಬಲಪಡಿಸಲು ಕರೆ

ತಾರೀಕು 10-2-83 ರಂದು ದ.ಕ. ಜಿಲ್ಲಾ ಉಜ್ರೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಂದಾಳು ಮತ್ತು ರೈತ ಕಾರ್ಮಿಕರ ನಾಯಕರಾದ ಕಾ. ಎಂ. ಕೆ. ಭಟ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲ್ಲೂಕು ಸಮಿತಿ ಸಭೆಯಲ್ಲಿ ಬದಲಾದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ರೈತ ಮತ್ತು ಹಳ್ಳಿಯ ಬಡಜನರ ಸಂಘಟನೆಯನ್ನು ಬಲಪಡಿಸಲು ಬೇರೆ ಬೇರೆ ಮುಂದಾಳುಗಳು ಕರೆಇತ್ತರು.

ದೇಶದ ಮತ್ತು ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಮಾತನಾಡಿದ ತಾಲ್ಲೂಕು ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾ. ಕೆ. ವಿ. ರಾವ್ ಅವರುಕಾಂಗ್ರೆಯೇನೋ ಸೋತಿದ್ದರೂ ಕೋಮುಶಕ್ತಿಗಳು ತಲೆ ಎತ್ತಿವೆ ; ನಿಜವಾದ ಪರ್ಯಾಯವೊಂದು ಬೆಳೆಯಬೇಕಾದರೆ ನಮ್ಮ ನೇತೃತ್ವದಲ್ಲಿ ರೈತ, ಕಾರ್ಮಿಕ ಮತ್ತು ಜನ ಸಂಘಟನೆಗಳು ಪ್ರಬಲವಾಗಿ ಬೆಳೆಯಬೇಕಿದೆ. ಇಂದಿನ ಪರಿಸ್ಥಿತಿಯನ್ನು ಉಪಯೋಗಿಸಿ ವ್ಯವಸ್ಥಿತವಾಗಿ ಸಂಘಟನೆ ಕಟ್ಟಬೇಕು ಎಂದರು.

ರಾಜ್ಯದಲ್ಲಿ ಬದಲಾಗಿರುವ ರಾಜಕೀಯ ಪರಿಸ್ಥಿತಿಯ ಮಹತ್ವ ಮತ್ತು ಅದರಲ್ಲಿ ರೈತ ಮತ್ತು ಕಾರ್ಮಿಕರ ಪಾತ್ರವನ್ನು ವಿವರಿಸಿದ ಕಾ. ಎಂ.ಕೆ. ಯವರು ಇಂದು ಅಧಿಕಾರದಲ್ಲಿರುವ ಸರಕಾರದ ಇತಿಮಿತಿಗಳನ್ನು ತಿಳಿದುಕೊಂಡು ದುಡಿಯುವ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ನಾವು ಪ್ರಜಾಸತ್ತಾತ್ಮಕವಾಗಿ ಒತ್ತಾಯ ತರಬೇಕಾಗಿದೆ. ಸರ್ವಾಧಿಕಾರಿ ಕಾಂಗ್ರೆ ಅಥವಾ ತಲೆಎತ್ತಿರುವ ಕೋಮುಶಕ್ತಿಗಳು ಪರಿಸ್ಥಿತಿಯ ದುರುಪಯೋಗ ಮಾಡದಂತಾಗಬೇಕಾದರೆ ನಾವು ದೊಡ್ಡ ರೀತಿಯಲ್ಲಿ ಜನತೆಯ ಮಧ್ಯೆ ಪ್ರಚಾರ ಮಾಡಿ, ರಾಜಕೀಯ ತಿಳುವಳಿಕೆ ನೀಡಿ, ಬೃಹತ್ ಪ್ರಮಾಣದಲ್ಲಿ ಹಳ್ಳಿಯ ಬಡಜನರ ಸಂಘಟನೆ ಕಟ್ಟಿ, ಹೋರಾಟಗಳನ್ನು ನಡೆಸಬೇಕಾಗಿದೆ. ಗ್ರಾಮಮಟ್ಟದಿಂದಲೇ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಿ ಸಹಸ್ರ ಸಂಖ್ಯೆಯಲ್ಲಿ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸಲು ಮುಂದಾಗಬೇಕೆಂದು ಕರೆ ಇತ್ತ ಕಾ. ಎಂ. ಕೆ. ಯವರು ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ನಿರ್ಣಯಗಳನ್ನು ವಿವರಿಸಿದರು.

ಕರ್ನಾಟಕ ಚುನಾವಣೆ - ಒಂದು ವಿಶ್ಲೇಷಣೆ

(3ನೇ ಪುಟದಿಂದ)

ಅಲ್ಲದೆ ಬಿ.ಜೆ.ಪಿ.ಯ 8 ಸ್ಥಾನಗಳು ದಕ್ಷಿಣ ಕನ್ನಡ ಜಿಲ್ಲೆ ಒಂದರಿಂದಲೇ ಬಂದಿರುವುದು, ಬೆಂಗಳೂರು, ಮೈಸೂರು ಮುಂತಾದ ನಗರ ಪ್ರದೇಶಗಳಲ್ಲಿ ಮತ್ತು ರಾಜಕೀಯವಾಗಿ ಸಕ್ರಿಯ ಜಿಲ್ಲೆಗಳಲ್ಲಿ ಬಿ.ಜೆ.ಪಿ. ಸ್ಥಾನ ಗಳಿಸದಿರುವುದು ಅದು ತಾನು ರಾಷ್ಟ್ರೀಯ ಪರ್ಯಾಯವೆಂದು ಡಂಗುರ ಸಾರುವುದು ಹುರುಳಿಲ್ಲದ್ದು ಎಂದು ಸಿದ್ಧಪಡಿಸುತ್ತದೆ. ಈ ಪಕ್ಷದ ಪ್ರಭಾವ ಭೌಗೋಳಿಕವಾಗಿ ಇನ್ನಷ್ಟು ಚದುರಿ ಹೋಗಿದ್ದರೆ, ಇದರ ಸ್ಪರ್ಧೆಯಿಂದ ಕಾಂಗ್ರೆಸ್ ಅಧಿಕಾರ ಉಳಿಸಿಕೊಳ್ಳಲು ಸಾಧ್ಯವಾಗುತ್ತಿತ್ತು. 1978 ಮತ್ತು 1980ರ ಹಳೆಕಾಗ ಪುನರಾವರ್ತನೆಯಾಗುತ್ತಿತ್ತು. ಬಿಜೆಪಿ ವಿರೋಧಿರಂಗದೊಂದಿಗೆ ಚುನಾವಣೆ ಹೊಂದಾಣಿಕೆಮಾಡಿಕೊಂಡಿದ್ದರೆ ಜನತಾ ರಂಗಕ್ಕೇನೇ ನಿಚ್ಚಳ ಬಹುಮತ ಬರುವ, ಕಾಂಗ್ರೆಸ್ (ಐ) ಇನ್ನೂ ಕ್ಷೀಣ ಸ್ಥಿತಿಗೆ ತಳ್ಳಲ್ಪಟ್ಟು ಯಾವುದೇ ತರದ ಕುತಂತ್ರಗಳಿಗಾಸ್ಪದ ಕೊಡದಿರುವ ಸ್ಪಷ್ಟ ಸಾಧ್ಯತೆ ಇತ್ತು.

ಎಂ. ಇ. ಎಸ್. ತನ್ನ 5 ಸ್ಥಾನಗಳನ್ನು ಉಳಿಸಿಕೊಂಡಿದೆ ಎಂಬುದು ವಿಶೇಷವೇನಲ್ಲ. ಬಹಳಷ್ಟು ಪಕ್ಷೇತರರು ಸ್ಪರ್ಧಿಸಿ ಗೆದ್ದಿರುವುದು ಇನ್ನೊಂದು ಹೊಸ ಬೆಳವಣಿಗೆ ಆದರೆ ಇದರಲ್ಲಿ ಒಬ್ಬಿಬ್ಬರು ಮಾತ್ರ ಕಾಂಗ್ರೆಸ್ (ಐ) ಭಿನ್ನಮತೀಯರು ಎಂಬುದೂ ಗಮನಾರ್ಹ. ಇದು ಕಾಂಗ್ರೆ ಸೋಲಿಗೆ ಭಿನ್ನಮತೀಯರ ಸ್ಪರ್ಧೆ ಕಾರಣವಿರಬಹುದು ಎಂಬ ಸಂದೇಹವನ್ನು ನಿವಾರಿಸುತ್ತದೆ.

ಈ ಚುನಾವಣೆಗಳಲ್ಲಿ ಜಾತಿ, ಧರ್ಮದ ಪ್ರಭಾವ ಬಹಳಷ್ಟು ಕಡಿಮೆಯಾಗಿರುವುದು ಕಂಡು ಬಂದಿದೆ. ಕಾಂಗ್ರೆ ಮತ ಬ್ಯಾಂಕುಗಳಂತಿದ್ದ ಹರಿಜನ–ಗಿರಿಜನ, ಮುಸ್ಲಿಮರು, ಹಿಂದುಳಿದ ಜನಾಂಗಗಳು ದೊಡ್ಡ ಪ್ರಮಾಣದಲ್ಲಿ ಅದನ್ನು ತ್ಯಜಿಸಿರುವುದು ಕಂಡುಬರುತ್ತದೆ. ಅಲ್ಲದೆ ವ್ಯಕ್ತಿಯ ಜಾತಿಗಿಂತ ಪಕ್ಷಕ್ಕೆ ಹೆಚ್ಚಿನ ಒತ್ತು ಬಿದ್ದಿರುವುದು ಕಂಡುಬರುತ್ತದೆ. 1978 ರಲ್ಲಿ 33 ಮೀಸಲು ಸ್ಥಾನಗಳಲ್ಲಿ ಕಾಂಗ್ರೆಸ್ (ಐ) 26 ಸ್ಥಾನಗಳನ್ನು ಹೊಂದಿದ್ದು ಅದರ ಸಂಖ್ಯೆ 1983 ರಲ್ಲಿ 9ಕ್ಕೆ ಇಳಿದಿದೆ.

ಒಟ್ಟಾರೆ ಹೇಳುವುದಾದರೆ ಕಾಂಗ್ರೆಸ್ ರಾಜಕೀಯದ, ಧೋರಣೆಗಳ ವಿರುದ್ಧ ಜನತೆ ಸ್ಪಷ್ಟ ರಾಜಕೀಯ ಧೋರಣೆ ತಳೆದಿರುವುದು ಮತ್ತು ಕಾಂಗ್ರೆಸ್ (ಐ) ವಿರೋಧಿ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ರಂಗ ಬಲಗೊಂಡಿರುವುದು ಕಂಡುಬರುತ್ತದೆ. ಇದು ರಾಜ್ಯದ ಮುಂದಿನ ರಾಜಕೀಯ ಬೆಳವಣಿಗೆ ದೃಷ್ಟಿಯಿಂದ ಸ್ವಾಗತಾರ್ಹ ಅಂಶ ಎಂದು ಬೇರೆ ಹೇಳಬೇಕಾಗಿಲ್ಲ.

ಮೈಸೂರು :

ವಿಕ್ರಾಂತ್ ಟೈರ್ಸ್ ಸರ್ವಸದಸ್ಯರ ಸಭೆ

ಮೈಸೂರಿನ ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್‌ನ ಸರ್ವಸದಸ್ಯರ ಸಭೆ ದಿ. 17–2–83 ರಂದು ಬೆಳಿಗ್ಗೆ 10 ಗಂಟೆಗೆ ಟೌನ್‌ಹಾಲ್‌ನಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕಾ। ಬಲದೇಂದ್ರ ವಹಿಸಿದ್ದರು.

ಸಂಘದ ಪ್ರ. ಕಾರ್ಯದರ್ಶಿ ಕಾ। ರಾಜೇಂದ್ರ ಅವರು ಮಾತನಾಡುತ್ತಾ ಆಡಳಿತ ವರ್ಗವು ಅನುಸರಿಸುತ್ತಿರುವ ಡಿಸ್‌ಮಿಸ್, ಸಸ್ಪೆನ್ಷನ್, ಕ್ಯಾಶುಯಲ್ ಲೇಬರ್ ಕಿರುಕುಳಗಳು, ಸೇವಾ ಹಿರಿತನಗಳನ್ನು ಕಡೆಗಣಿಸುವುದು ಇವುಗಳನ್ನು ಖಂಡಿಸಿ, ಕಾರ್ಮಿಕರು ಇವೆಲ್ಲವುಗಳ ವಿರುದ್ಧ ಒಗ್ಗಟ್ಟಿನಿಂದ ಹೋರಾಡಬೇಕೆಂದು ಕರೆ ನೀಡಿದರು.

ಯೂನಿಯನ್‌ನ ಸಲಹೆಗಾರರಾದ ಹಾಗೂ ವಿಧಾನಸಭಾ ಸದಸ್ಯರಾದ ಕಾ। ಸೂರ್ಯನಾರಾಯಣರಾವ್ ಅವರನ್ನು ಸಭೆಯಲ್ಲಿ ಅಭಿನಂದಿಸಲಾಯಿತು.

ಸರ್ವಸದಸ್ಯರ ಸಭೆಯಲ್ಲಿ ನೆರೆದಿದ್ದ ಕಾರ್ಮಿಕ ಸಮೂಹವು ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್ ಅನ್ನು ಸಿ. ಐ. ಟಿ. ಯು.ನೊಂದಿಗೆ ಸೇರ್ಪಡೆ ಮಾಡಬೇಕೆಂಬ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸಿದೆ.

ಪಾಕಿಸ್ತಾನದ ಆರ್ಥಿಕ ದುಃಸ್ಥಿತಿ

(2ನೇ ಪುಟದಿಂದ)

ಕಲಿಯಬೇಕಾಗಿದೆ. ಭೂಮಾಲಕ ಪದ್ಧತಿಯ ರದ್ದು. ಕೈಗಾರಿಕೆಗಳಲ್ಲಿ ಏಕಸ್ವಾಮ್ಯ ರದ್ಧತಿ, ವಿದೇಶಿ ಸಾಲ ಸಹಾಯಗಳ ಮೇಲೆ ಇತಿಮಿತಿ, ಜೀವನಾವಶ್ಯಕ ವಸ್ತುಗಳ ವ್ಯಾಪಕವಾದ ಸಾರ್ವಜನಿಕ ವಿತರಣೆ, ಬೃಹತ್ ಉತ್ಪಾದನಾ ಸಾಧನ ವಿಧಾನಗಳ ರಾಷ್ಟ್ರೀಕರಣ, ನಾಗರಿಕರ ಕಾರ್ಮಿಕರ ಹಕ್ಕುಗಳ ರಕ್ಷಣೆ ಸಂಸತ್ತು ಮಾದರಿಯದ್ದಾದರೂ ಪ್ರಜಾಪ್ರಭುತ್ವ, ಇತ್ಯಾದಿ ಮೂಲಭೂತವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಬದಲಾವಣೆಗಳನ್ನು ತಡಮಾಡದೆ ಅನುಷ್ಠಾನಕ್ಕೆ ತಾರದಿದ್ದರೆ, ದೇಶ ಸ್ವಾತಂತ್ರ್ಯ, ಸಾರ್ವಭೌಮತೆ ಕಳೆದುಕೊಂಡು ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗಬೇಕಾದೀತು.

ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯ ಮಾರ್ಗವನ್ನು ಅನುಸರಿಸುತ್ತಾ ಬಂದ ಭಾರತದಲ್ಲಿಯೂ ವೈರುಧ್ಯಗಳು ಇಂದು ಸ್ಪಷ್ಟವಾಗಿ ಹೆಡೆಬಿಚ್ಚಿವೆ. ಸಂಸತ್ತು ಮಾದರಿ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಉಂಟಾಗಿದ್ದು ಸರ್ವಾಧಿಕಾರಿ ಶಕ್ತಿಗಳು ಪ್ರಬಲವಾಗುತ್ತಿವೆ. ಜಾತ್ಯಾತೀತ ತತ್ವವು ಮರೆಯಾಗಿ ಮತೀಯ ಗಲಭೆಗಳು ಹೆಚ್ಚುತ್ತಿವೆ. ಹರಿಜನ ಗಿರಿಜನರ ಮೇಲಿನ ತುಳಿತ ಹೆಚ್ಚುತ್ತಿದೆ. ರಾಷ್ಟ್ರೀಯ ಐಕ್ಯತೆ ಸಡಿಲವಾಗಿ ಈಶಾನ್ಯ ಭಾರತದಲ್ಲಿ ಅಸ್ಸಾಂ ಚಳವಳಿ, ವಾಯುವ್ಯ ಭಾರತದಲ್ಲಿ ಖಲಿಸ್ತಾನ ಚಳವಳಿ ತಲೆ ಎತ್ತಿವೆ. ಆರು ಪಂಚವಾರ್ಷಿಕ ಯೋಜನೆಗಳ ನಂತರವೂ ದೇಶದಲ್ಲಿ ಬಡತನ, ನಿರುದ್ಯೋಗ ನಿರಕ್ಷರತೆ, ಬೆಲೆಏರಿಕೆ, ಹಣದುಬ್ಬರ ಸಮಸ್ಯೆಗಳು ಹೆಚ್ಚುತ್ತಿವೆ. ವಿದೇಶಿ ಸಾಲದ ಹೊರೆ ಹೆಚ್ಚಾಗಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಶರತ್ತುಗಳಿಗೆ ಶರಣಾಗಬೇಕಾಗಿದೆ. ಬಹುರಾಷ್ಟ್ರೀಯ ಸಂಸ್ಥೆಗಳು, ದೇಶದ ಭೂಮಾಲಕ ಮತ್ತು ಏಕಸ್ವಾಮ್ಯ, ಕೈಗಾರಿಕಾ ಕುಟುಂಬಗಳು ಭಾರೀವ್ಯಾಪಾರಸ್ತರು ಬಡವರ, ಕಾರ್ಮಿಕರ, ರೈತರ ಹೊಟ್ಟೆಗೆ ಹೊಡೆದು ತಮ್ಮ ಆಸ್ತಿ ಆದಾಯಗಳನ್ನು ಕೋಟಿಗಟ್ಟಲೆ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಜಾಗೃತಜನ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನೇತೃತ್ವದಲ್ಲಿ ದೇಶಕ್ಕೆ ಬಂದೊದಗಿದ ಅಪಾಯವನ್ನು ಸಂಘಟಿತ ಹೋರಾಟಗಳಿಂದ ಅಳಿಸಬಹುದೆಂಬುದೇ ನಮ್ಮ ಆಶಯ. ನೆರೆಯ ಪಾಕಿಸ್ತಾನದ ಪ್ರಜಾಸತ್ತಾತ್ಮಕ ಶಕ್ತಿಗಳೂ ಅಲ್ಲಿಯ ಜನಕೋಟಿಯನ್ನು ಸರ್ವಾಧಿಕಾರಿ ಶಕ್ತಿಗಳಿಂದ ರಕ್ಷಿಸಲು ನಡೆಸುತ್ತಿರುವ ಸಂಘಟಿತಹೋರಾಟಗಳಿಗೆ ನಮ್ಮ ತುಂಬು ಬೆಂಬಲ. ಉಭಯ ದೇಶಗಳ ಪುರೋಗಾಮಿ, ಪ್ರಜಾಸತ್ತಾತ್ಮಕ, ಎಡ ಶಕ್ತಿಗಳು ತಮ್ಮ ಸಾಮಾನ್ಯವಾದ ವಿರೋಧಿ ಶಕ್ತಿಗಳನ್ನು ಗುರುತಿಸಿಕೊಂಡು ನಡೆಸುವ ಹೋರಾಟಗಳಿಂದಲೇ ಈ ಉಪಖಂಡದಲ್ಲಿ ಯುದ್ಧ ಭೀತಿ ಹೋಗಿ ಶಾಂತಿ ಸೌಹಾರ್ದತೆ ಸಾಧ್ಯ.

ಎಸ್. ಎಫ್. ಐ. ಚಟುವಟಿಕೆಗಳು

ಬೆಳಗಾವಿಯಲ್ಲಿ ಎಸ್.ಎಫ್.ಐ. ಘಟಕದ ಸ್ಥಾಪನೆ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.)ನ ಬೆಳಗಾವಿ ಘಟಕದ ಉದ್ಘಾಟನೆಯು 15-2-83 ರಂದು ಜ್ಯೋತಿ ಕಾಲೇಜಿನಲ್ಲಿ ಯಶಸ್ವಿಯಾಗಿ ನೆರವೇರಿತು. ಎಸ್.ಎಫ್.ಐ.ನ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾ. ಎಸ್. ಆರ್. ಆರಾಧ್ಯ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ವಿದ್ಯಾರ್ಥಿ ಚಳುವಳಿಯಲ್ಲಿ ಪ್ರಾಣಾರ್ಪಣೆಮಾಡಿದ ಎಸ್.ಎಫ್.ಐ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದ ಬಳಿಕ ಕ್ರಾಂತಿ ಗೀತೆಗಳೊಂದಿಗೆ ಸಭೆ ಪ್ರಾರಂಭವಾಯಿತು.

ಸಭೆಯನ್ನುದ್ದೇಶಿಸಿ ಕಾ. ಆರಾಧ್ಯ, ನಿತ್ಯಾನಂದ ಸ್ವಾಮೀಜಿ, ಕಾಮಾಕ್ಷಿ ಭಾಟೆ ಅವರುಗಳು ಮಾತನಾಡಿದರು. ಬೆಳಗಾವಿ ಘಟಕದ ಸಂಚಾಲಕಿ ಕಾ. ಬಿ. ಉಷಾ ಅವರು ನಿರ್ಣಯಗಳನ್ನು ಮಂಡಿಸಿದರು. ಲೋಕವಿಜ್ಞಾನ ಸಂಘಟನೆಯವರು ಮೂಢ ನಂಬಿಕೆ ವಿರೋಧಿ ನಾಟಕ ಮತ್ತು ಪೋಸ್ಟರ್ ಪ್ರದರ್ಶನಗಳನ್ನು ಏರ್ಪಡಿಸಿದ್ದರು.

ಬೆಂಗಳೂರು :

'ಬಳ್ಳಾರಿ ಪ್ರಕರಣ'ದ ಬಗ್ಗೆ ಪ್ರತಿಭಟನಾ ಪ್ರದರ್ಶನ

ಫೆಬ್ರವರಿ 16ರಂದು ಬಳ್ಳಾರಿಯಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯೊಬ್ಬಳ ಮೇಲೆ ನಡೆದ ಅತ್ಯಾಚಾರವನ್ನು ಪ್ರತಿಭಟಿಸಿ ಪೋಲೀಸ್ ಠಾಣೆಯ ಎದುರು ಪ್ರತಿಭಟನಾ ಪ್ರದರ್ಶನ ನಡೆಸುತ್ತಿದ್ದವರ ಮೇಲೆ ಗೋಲಿಬಾರ್ ನಡೆಸಿದ ಪ್ರಕರಣವನ್ನು ಎಸ್.ಎಫ್.ಐ ಬೆಂಗಳೂರು ನಗರ ಸಮಿತಿ ತೀವ್ರವಾಗಿ ಖಂಡಿಸಿ ದಿನಾಂಕ 19-2-83 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಿಂದ ವಿಧಾನ ಸೌಧದವರೆಗೆ ಮೆರವಣಿಗೆ ನಡೆಸಿತು. ಬೆಂಗಳೂರಿನ ವಿವಿಧ ಕಾಲೇಜುಗಳ ಪ್ರತಿನಿಧಿಗಳು ಭಾಗವಹಿಸಿದ್ದ ಈ ಮೆರವಣಿಗೆಯ ನಂತರ ಎಸ್.ಎಫ್.ಐ. ನಗರ ಸಮಿತಿ, ಜಿಲ್ಲಾ ಸಮಿತಿ ಮತ್ತು ರಾಜ್ಯಸಮಿತಿಯ ನಿಯೋಗವು ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ಅವರ ಆಪ್ತ ಕಾರ್ಯದರ್ಶಿಗಳಿಗೆ ಮನವಿ ಅರ್ಪಿಸಿತು. ಬಳ್ಳಾರಿ ಪ್ರಕರಣದ ಬಗ್ಗೆ ಶೀಘ್ರವೇ ನ್ಯಾಯಾಂಗ ತನಿಖೆಯಾಗಬೇಕು, ಅತ್ಯಾಚಾರ ನಡೆಸಿದ ಮತ್ತು ಗೋಲಿಬಾರ್‌ಗೆ ಕಾರಣರಾದ ಪೋಲೀಸು ಪೇದೆಗಳನ್ನು, ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಬೇಕು ಮತ್ತು ಗೋಲಿಬಾರ್‌ನಲ್ಲಿ ಮಡಿದವರ ಕುಟುಂಬಗಳಿಗೆ ತಲಾ 25,000 ರೂ ಪರಿಹಾರ ಧನ ನೀಡಬೇಕೆಂದು ಒತ್ತಾಯಿಸಲಾಯಿತು.

ಬೆಂಗಳೂರು :

ಜಿಲ್ಲಾ ಕಛೇರಿಯ ಎದುರು ಪ್ರತಿಭಟನಾ ಪ್ರದರ್ಶನ

ನಗರ ವಿವಿಧ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಫ್ರೀಶಿಪ್ ಮತ್ತು ಸ್ಕಾಲರ್‌ಶಿಪ್ ಸೌಲಭ್ಯವನ್ನು ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಎಸ್.ಎಫ್.ಐ. ಬೆಂಗಳೂರು ನಗರ ಸಮಿತಿ ತೀವ್ರವಾಗಿ ಪರಿಗಣಿಸಿ ಫ್ರೀಶಿಪ್ ಮತ್ತು ಸ್ಕಾಲರ್ ಶಿಪ್‌ಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ಮಂಜೂರು ಮಾಡುವಂತೆ ಮತ್ತು ಸ್ಕಾಲರ್‌ಶಿಪ್ ಫ್ರೀಶಿಪ್ ನೀಡುವಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ತಡೆಗಟ್ಟುವಂತೆ ಮತ್ತು ಫ್ರೀಶಿಪ್ ಆದಾಯ ಮಿತಿಯನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿ ದಿನಾಂಕ 15.2.83 ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿ, ವಿಶೇಷ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು. ದಿನಾಂಕ 15ರಂದು ನಡೆಯುತ್ತಿರುವ ಪ್ರಿನ್ಸಿಪಾಲರ ವಿಶೇಷ ಸಭೆಯಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಮಾತನಾಡಲು ಎಸ್.ಎಫ್.ಐ.ನ ವತಿಯಿಂದ ನಿಯೋಗವನ್ನು ವಿಶೇಷ ಜಿಲ್ಲಾಧಿಕಾರಿಗಳು ಆಹ್ವಾನಿಸಿದ್ದಾರೆ ಎಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.

ಪ ರಿ ಸ ರ

* ದೆಹಲಿ ಮೆಟ್ರೊಪಾಲಿಟನ್ ಕೌನ್ಸಿಲ್‌ನ 34 ಸದಸ್ಯರ ಕಾಂಗ್ರೆಸ್ (ಐ) ಪಾರ್ಟಿ ನಾಯಕರಾಗಿ ಜಗಪ್ರವೇಶ ಚಂದ್ರರ ಆಯ್ಕೆ "ಮೇಲಿನಿಂದ ಸೂಚನೆ ಇಲ್ಲದೆಯೇ" ನಡೆದಂಥ ಆಯ್ಕೆ.

  —ಎಚ್. ಎಲ್. ಕೆ. ಭಗತ್ (ದೆಹಲಿ ಪ್ರದೇಶ ಕಾಂಗ್ರೆ ಸಮಿತಿ ಅಧ್ಯಕ್ಷ)

* ಆಯ್ಕೆಗಾರ, ಕೋಚ್ ಮತ್ತು ಕ್ಯಾಪ್ಟನ್ ಇವು ಮೂರು ಜವಾಬ್ದಾರಿಗಳನ್ನು ಒಬ್ಬ ವ್ಯಕ್ತಿಯೇ ನಿರ್ವಹಿಸುತ್ತಿದ್ದು ಆ ವ್ಯಕ್ತಿಯೇ ಅದ್ಭುತ ಪರಾಭವಕ್ಕೆ ಕಾರಣವಾದ ಮೇಲೆ ಕೇವಲ ಟೀಮನ್ನು ಬದಲಾಯಿಸಿ ಕ್ಯಾಪ್ಟನನ್ನು ಹಾಗೇ ಉಳಿಸುವ ಪ್ರಯತ್ನ ನಿಜಕ್ಕೂ ಹಾಸ್ಯಾಸ್ಪದವಾದದ್ದು. —ಅಟಲ್ ಬಿಹಾರಿ ವಾಜಪೇಯಿ

* ದೇಶದಲ್ಲಿ ಹಲವು ರಾಜ್ಯಗಳ ರಾಜಧಾನಿ ಮತ್ತು ಇತರ ಪ್ರಮುಖ ಪಟ್ಟಣಗಳಲ್ಲಿ ಮುನಿಸಿಪಲ್ ಚುನಾವಣೆಗಳು 3 ರಿಂದ 23 ವರ್ಷಗಳಷ್ಟು ಅವಧಿಯಿಂದ ನಡೆದಿಲ್ಲ ಎಂದು ಯು. ಎನ್. ಐ. ದೇಶಾದ್ಯಂತ ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದೆ. —ಯು.ಎನ್.ಐ.

* 1982-83ರ ಆಹಾರಧಾನ್ಯಗಳ ಉತ್ಪಾದನೆ ಕಳೆದ ವರ್ಷಕ್ಕಿಂತಲೂ 5 ಮಿಲಿಯ ಟನ್ ಕಡಿಮೆ ಆಗಿರುವ ಸಾಧ್ಯತೆಇದೆ ಎಂದು ಕೃಷಿ ಖಾತೆಗೆ ದೊರಕುತ್ತಿರುವ ಹಿಂಗಾರು ಮುಂಗಾರು ಬೆಳೆಗಳ ವರದಿಯಿಂದ ತಿಳಿದು ಬಂದಿದೆ. ಇದು ಸುಮಾರು 128 ಮಿಲಿಯ ಟನ್ ಆಗುವ ಸಾಧ್ಯತೆ ಇದ್ದು, ಉತ್ಪಾದನಾ ಗುರಿ 141 ಮಿಲಿಯ ಟನ್ ಆಗಿತ್ತು. ಇದಕ್ಕೆ ಕಾರಣ ಬರ ಮತ್ತು ನೆರೆ ಎಂದು ಅಧಿಕೃತವಾಗಿ ತಿಳಿಸಲಾಗಿದೆ.

  —ಇ. ಎಸ್. ಎಸ್. ಫೆ 10

* ದೇಶದ ಅತಿದೊಡ್ಡ ಕಂಪನಿಗಳು ಕೊಡಬೇಕಾಗಿದ್ದ ಎಕ್ಸೈಜ್ ಮತ್ತು ಕಸ್ಟಮ್ಸ್ ಸುಂಕ ತಪ್ಪಿಸಲು ಕೋರ್ಟಿಗೆ ಹೋಗಿದ್ದ ಪ್ರಕರಣಗಳು ಸುಪ್ರೀಂ ಕೋರ್ಟಿನಲ್ಲಿ ಈ ತಿಂಗಳಲ್ಲಿ ಅಂತಿಮವಾಗಿ ಇತ್ಯರ್ಥವಾಗಲಿದ್ದು ಈ ಕಂಪನಿಗಳು ಗೆದ್ದರೂ ಸೋತರೂ ಸುಮಾರು 2000 ಕೋಟಿ ರೂ.ಗಳಷ್ಟು ಸುಂಕ ಕಟ್ಟಬೇಕಾಗುತ್ತದೆ.(ಗೆದ್ದರೆ) ಇಲ್ಲವೆ 1000 ರೂ. ನಷ್ಟ ಕಂಪನಿ ಆದಾಯ ತೆರಿಗೆ ಕೊಡಬೇಕಾಗುತ್ತದೆ (ಸೋತರೆ)

  —ಇ.ಎಸ್.ಎಸ್. ಫೆ 13

ರಾಜ್ಯದಲ್ಲಿ ನಡೆದಿರುವ ದಂಗೆಗಳು

(ಒಂದನೇ ಪುಟದಿಂದ)

ಬಿಜಾಪುರದಲ್ಲಿ ಕಿಡಿಗೇಡಿಗಳನ್ನು ಹಿಡಿಯುವಲ್ಲಿ ಪೋಲೀಸರು ವಿಫಲರಾಗಿದ್ದಾರೆ. ಬಳ್ಳಾರಿಯಲ್ಲಿ ಮಟಕಾ ದೊರೆಗಳಿಗೆ ಪೋಲೀಸ್ ಅಧಿಕಾರಿಗಳೂ, ಪೋಲೀಸರೂ ಬೆಂಬಲ ನೀಡಿ, ಲೂಟಿ, ದಂಗೆಗಳಾಗುವಂತೆ ಮಾಡಿ, ನಿರಪರಾಧಿಗಳ ಮೇಲೆ ಗೋಳಿಬಾರು ಮಾಡಿಸಿದ್ದಾರೆ.

ಬೆಂಗಳೂರಿನಲ್ಲಿ ಕಿಡಿಗೇಡಿಗಳಿಗೂ, ಗೂಂಡಾ ಜನರಿಗೂ ಆಶ್ರಯ ನೀಡಿ ಆಟೋರಿಕ್ಷಾ ಚಾಲಕರ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ.

ಕಾಂಗ್ರೆ ಆಳ್ವಿಕೆಯಲ್ಲಿ ನೌಕರಿಯಲ್ಲಿ ಸೇರಿದ ಪೋಲೀಸ್ ಖಾತೆಯು ಜನ ರಾಜ್ಯವನ್ನು ಆಳುತ್ತಾ ಬಂದ ಕಾಂಗ್ರೆ ದೊರೆಗಳಂತೆಯೇ ವರ್ತಿಸುತ್ತಿದ್ದಾರೆ. ಕೆಲವೇ ಪೋಲೀಸ್ ಅಧಿಕಾರಿಗಳ ಮತ್ತು ಪೋಲೀಸರ ಕೃತಿಗಳು ಇಡೀ ಪೋಲೀಸ ಖಾತೆಗೇನೇ ಕೆಟ್ಟ ಹೆಸರು ತಿರುತ್ತಿದೆ. ನಿಷ್ಠಾವಂತ ಅಧಿಕಾರಿಗಳೂ, ಪೋಲೀಸರೂ, ತಮ್ಮ ಡಿಪಾರ್ಟ್‌ಮೆಂಟಿನ ಹೆಸರು ಕೆಡದಂತೆ ತಾವು ನಿಜವಾಗಿಯೂ ಜನರ ರಕ್ಷಕರಂತೆ ಹೆಸರು ಗಳಿಸಲು ಯತ್ನಿಸುವುದಗತ್ಯ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಜಾತೀಯ, ಮತೀಯ ಶಕ್ತಿಗಳ ವಿರುದ್ಧ, ಅವರ ಅಪಪ್ರಚಾರ, ಪ್ರಚೋದನೆಗಳ ವಿರುದ್ಧ ಜನತೆಯನ್ನು ಜಾಗೃತಿಗೊಳಿಸಿ ಹೋರಾಡಲೇ ಬೇಕು. ಇದು ಅತ್ಯಂತ ಅವಶ್ಯ ಕೆಲಸವೆಂದು ಪರಿಗಣಿಸಿ ಕಾರ್ಯಪ್ರವೃತ್ತರಾಗೋಣ.

ಮಾರ್ಚ್‌ನಲ್ಲಿ ಕೋಮ್ಸೋಮೋಲ್ ನಿಯೋಗದ ಭೇಟಿ

ಸೋವಿಯತ್ ಯೂನಿಯನ್‌ನ ಯುವಜನ ಸಂಘಟನೆಯಾದ ಕೋಮ್ಸೋಮೋಲ್‌ನ ನಾಲ್ಕು ಮಂದಿ ಉನ್ನತ ನಾಯಕರನ್ನೊಳಗೊಂಡ ನಿಯೋಗ ಪ್ರಥಮ ಬಾರಿಗೆ ಮಾರ್ಚ್ ಮೊದಲ ವಾರದಲ್ಲಿ ಭಾರತಕ್ಕೆ ಭೇಟಿ ನೀಡಿ ಡಿ. ವೈ. ಎಫ್. ಐ. ಮತ್ತು ಎಸ್. ಎಫ್. ಐ. ನೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದೆ. ಈ ವಿಷಯವನ್ನು ಪ್ರಕಟಿಸಲು ಡಿ. ವೈ. ಎಫ್. ಐ. ಕೇಂದ್ರ ಸಮಿತಿ ತನ್ನ ಹರ್ಷವನ್ನು ವ್ಯಕ್ತಪಡಿಸಿದೆ.

ಜನವರಿ 17 ರಂದು ನವದೆಹಲಿಯ ಡಿ. ವೈ. ಎಫ್. ಐ. ಕಚೇರಿಯಲ್ಲಿ ನಡೆದ ಸಭೆಯಲ್ಲಿ ಇದನ್ನು ನಿರ್ಧರಿಸಲಾಯಿತು. ಈ ಸಭೆಯಲ್ಲಿ ಸೋವಿಯತ್ ಯೂನಿಯನ್‌ನ ಯಂಗ್ ಕಮ್ಯುನಿಸ್ಟ್ ಲೀಗ್‌ನ ಕೇಂದ್ರ ಸಮಿತಿ ಕಾರ್ಯದರ್ಶಿ ಮತ್ತಿತರ ಉನ್ನತ ಪದಾಧಿಕಾರಿಗಳು ಭಾಗವಹಿಸಿದ್ದರೆಂದು ಡಿ. ವೈ. ಎಫ್. ಐ. ಕೇಂದ್ರ ಸಮಿತಿ ಪ್ರಕಟನೆ ತಿಳಿಸಿದೆ.

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿ ಸದಸ್ಯರ ಅವಗಾಹನೆಗೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ತಾರೀಕು 6-3-83ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಲ್ಲಿ ಶಾಸಕರ ಭವನದ 234ನೇ ಕೊಠಡಿಯಲ್ಲಿ ನಡೆಯುತ್ತದೆ. ಈ ಬಗ್ಗೆ ಪ್ರತ್ಯೇಕವಾದ ಸುತ್ತೋಲೆಯನ್ನು ಸಂಬಂಧಪಟ್ಟವರಿಗೆ ಕಳುಹಿಸಲಾಗಿದೆ. ರಾಜ್ಯ ಸಮಿತಿಯ ಸದಸ್ಯರು ಅಂದು ಕ್ಲುಪ್ತ ಕಾಲದಲ್ಲಿ ಸಭೆಗೆ ಬರಬೇಕು. ಬರುವಾಗ ಆಯಾ ಪ್ರದೇಶಗಳಲ್ಲಿರುವ ಸಿ. ಐ. ಟಿ. ಯು. ಗೆ ಸೇರ್ಪಡೆಯಾಗಿರುವ ಕಾರ್ಮಿಕ ಸಂಘಗಳ 1981-82ರ ಸದಸ್ಯತ್ವದ ವಿವರಗಳನ್ನು ತರಬೇಕು.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ. ಐ. ಟಿ. ಯು.
ಕರ್ನಾಟಕ ರಾಜ್ಯ ಸಮಿತಿ

ಕುಂದಾಪುರ : ನೆರೆ ಪರಿಹಾರ ಶೀಘ್ರ ವಿತರಣೆಗೆ ಒತ್ತಾಯ

ಕಳೆದ ವರ್ಷ ಆಗಸ್ಟ್ 2ರ ನೆರೆ ಹಾವಳಿಯಿಂದ ಮನೆ, ಆಸ್ತಿ ಪಾಸ್ತಿ ನಷ್ಟಹೊಂದಿದವರಿಗೆ ಕೂಡಲೇ ಪರಿಹಾರ ಹಣವನ್ನು ಕೊಡಬೇಕು ; 1974ರಲ್ಲಿ ನೆರೆ ಪೀಡಿತರಿಗೆ ಕೊಟ್ಟ ಸಾಲವನ್ನು ರದ್ದುಗೊಳಿಸಬೇಕು. ಹೆಚ್ಚುವರಿ ಸರ್ಕಾರೀ ಭೂಮಿಯನ್ನು ಭೂರಹಿತರಿಗೆ ಹಂಚಬೇಕು ; ನಿವೇಶನ ರಹಿತರಿಗೆ ಸರಕಾರೀ ಜಾಗದಲ್ಲಿ ಕನಿಷ್ಟ 10 ಸೆಂಟ್ಸ್ ಹೌಸ್ ಸೈಟನ್ನು ವಿತರಣೆ ಮಾಡಬೇಕು ಇತ್ಯಾದಿ ಬೇಡಿಕೆಗಳುಳ್ಳ ಮನವಿ ಪತ್ರವನ್ನು ಕುಂದಾಪುರ ರೈತ ಸಂಘದವರು ತಹಸೀಲ್ದಾರ್ ಅವರಿಗೆ ಅರ್ಪಿಸಿದರು.

ಹಳ್ಳಿ ಪ್ರದೇಶದ ನೂರಾರು ನೆರೆ ಪೀಡಿತರೂ, ಕೃಷಿ ಕೂಲಿಗಾರರೂ ತಾಲ್ಲೂಕು ಕಚೇರಿ ಎದುರು ನೆರೆದು ತಮ್ಮ ಸಂಕಷ್ಟಗಳಿಗೆ ಶೀಘ್ರ ಪರಿಹಾರ ದೊರಕಿಸಬೇಕೆಂದು ಕೇಳಿಕೊಂಡಾಗ ಮಾನ್ಯ ತಹಶೀಲ್ದಾರ್‌ರವರು ಈ ಬಗ್ಗೆ ಪರಿಶೀಲಿಸಿ ಸೂಕ್ತಕ್ರಮವನ್ನು ಕೈಕೊಳ್ಳುವುದಾಗಿ ನೆರೆ ಸಂತ್ರಸ್ತರಿಗೆ ಭರವಸೆ ಇತ್ತರು. 1974ರ ನೆರೆ ಸಾಲವನ್ನು ಬಲಾತ್ಕಾರವಾಗಿ ಜಪ್ತಿ ಮಾಡಿ ನೆರೆ ಸಂತ್ರಸ್ತರಿಂದ ವಸೂಲಿ ಮಾಡುವುದನ್ನು ಅಧಿಕಾರಿಗಳ ಗಮನಕ್ಕೆ ತಂದಾಗ ; ಈ ಬಗ್ಗೆಯೂ ತಾತ್ಕಾಲಿಕ ಜಪ್ತಿ ಮಾಡುವ ಕ್ರಮ ಕೈಬಿಡುವುದೆಂದು ತಿಳಿಸಿದರು. ಮುಖ್ಯಮಂತ್ರಿಯವರಿಗೆ ಬೇಡಿಕೆಯ ಮನವಿಯನ್ನು ಪ್ರತ್ಯೇಕ ಕೊಡಲಾಯಿತು. ಕೋಣಿ ಗ್ರಾಮದ ವತಿಯಿಂದ 50ಕ್ಕೂ ಹೆಚ್ಚಿನ ರೈತ ಕೂಲಿಕಾರರು 'ಕೋಣಿ ದೊಡ್ಡ ಜಡ್ಡು' ಸರಕಾರೀ ಭೂಮಿಯನ್ನು ಈ ಕೂಡಲೇ ನಿವೇಶನ ರಹಿತರಿಗೆ ಹಂಚಬೇಕೆಂದು ಕೇಳಿಕೊಂಡಾಗ ಅತೀ ಶೀಘ್ರದಲ್ಲಿ 'ಕೋಣಿ ದೊಡ್ಡ ಜಡ್ಡಿನ' ಸ್ಥಳ ತನಿಖೆಮಾಡಿ ನಿವೇಶನ ರಹಿತರಿಗೆ ಹೌಸ್ ಸೈಟನ್ನು ವಿತರಣೆ ಮಾಡುವೆನೆಂದು ತಹಶೀಲ್ದಾರರವರು ಭರವಸೆ ಇತ್ತರು.

ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ। ಅಬ್ರಹಾಂ ಕರ್ಕಡ, ತಾಲ್ಲೂಕು ರೈತ ಸಂಘದ ಅಧ್ಯಕ್ಷ ಕಾ। ಯು. ವಾಸ ಭಂಡಾರಿ, ಉಪಾಧ್ಯಕ್ಷ ಕಾ।ಗೋವಿಂದ ಸೆಟ್ಟಿಗಾರ್, ಕಾ। ಕೋಣಿ ವೆಂಕಟೇಶ ನಾಯಕ್ ಜತೆ ಕಾರ್ಯದರ್ಶಿ ರೈತ ಸಂಘ ಕುಂದಾಪುರ ಇವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560 053. Editorial and managerial office : L-56, K. V. Temple Street, Sultanpet, B-53. Phone : 24154 Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRA RAO